ಕಲ್ಯಾಣ ಕಿರಣ


ಜನವರಿ-2009

ಬೆಲೆ-10.00



ಪೂಜಿಸುವೆನಯ್ಯಾ ಬಸವಣ್ಣ
ನಿಮ್ಮ ಪ್ರಸಾದವೆನ್ನ ತನುವಹನ್ನಕ್ಕ





ಶರಣರ ಋಣವನ್ನು ತೀರಿಸಲು ಶರಣಮೇಳಕ್ಕೆ ಸ್ವಾಗತಿಸುತ್ತಿರುವ
ಶರಣ, ಶರಣೆಯರ ಮೂರ್ತಿಗಳು

ಗುರು ಬಸವಣ್ಣನವರ ಅಂಗೈಕ್ಯಕ್ಷೇತ್ರ ಕೂಡಲ ಸಂಗಮ



ಸಂಪುಟ-38 ಬಸವ ಶಕೆ-875 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-12 ಜನವರಿ- 2009 ವಾರ್ಷಿಕ ಚಂದಾ 100/- ರೂ.

ಬಸವಾಷ್ಟಕ

ನತಜನ ರಕ್ಷಕ ಶ್ರೀಗುರು ಬಸವ
ಲಿಂಗಾಯತ ಸಂಸ್ಥಾಪಕ ಶ್ರೀ ಗುರು ಬಸವ
ಇಷ್ಟಪ್ರದಾಯಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ || ಶರಣು ಶರಣಾರ್ಥಿ || ||1||

ವಚನ ಶಾಸ್ತ್ರಸಾರ್ವಭೌಮ ಶ್ರೀ ಗುರು ಬಸವ
ನವ ಪಥ ನಿರ್ಮಾಪಕ ಶ್ರೀಗುರು ಬಸವ
ಸಮತಾವಾದಿ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ || ಶರಣು ಶರಣಾರ್ಥಿ || ||2||

ಇಷ್ಟಲಿಂಗದಾತ ಶ್ರೀ ಗುರು ಬಸವ
ಇಷ್ಟಲಿಂಗಧಾರಕ ಶ್ರೀ ಗುರು ಬಸವ
ಇಷ್ಟಲಿಂಗ ಪೂಜಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ || ಶರಣು ಶರಣಾರ್ಥಿ || ||3||

ವಾಕ್ಸಿದ್ಧಿ ಪುರುಷ ಶ್ರೀ ಗುರು ಬಸವ
ಪಂಚ ಪರುಷ ಶ್ರೀ ಗುರು ಬಸವ
ಜೀವನ್ಮುಕ್ತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ || ಶರಣು ಶರಣಾರ್ಥಿ || ||4||

ಪತಿತೋದ್ಧಾರಕ ಶ್ರೀ ಗುರು ಬಸವ
ದಲಿತೋದ್ಧಾರಕ ಶ್ರೀ ಗುರು ಬಸವ
ಪಾವನಚರಿತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ || ಶರಣು ಶರಣಾರ್ಥಿ || ||5||

ಮಂತ್ರ ಪುರುಷ ಶ್ರೀ ಗುರು ಬಸವ
ಕ್ರಾಂತಿಯೋಗಿ ಶ್ರೀ ಗುರು ಬಸವ
ಶಾಂತಿದೂತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ || ಶರಣು ಶರಣಾರ್ಥಿ || ||6||

ಶರಣ ಪ್ರೇಮಿ ಶ್ರೀ ಗುರು ಬಸವ
ಶರಣ ಪ್ರೀತ ಶ್ರೀ ಗುರು ಬಸವ
ಶರಣ ಪಥದಾತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ || ಶರಣು ಶರಣಾರ್ಥಿ || ||7||

ಮುಕ್ತಿದಾಯಕ ಶ್ರೀ ಗುರು ಬಸವ
ಭಕ್ತೋದ್ಧಾರಕ ಶ್ರೀ ಗುರು ಬಸವ
ಬಸವಾತ್ಮಜೆ ಪಿತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ || ಶರಣು ಶರಣಾರ್ಥಿ || ||8||

ರಚನೆ- ಮಾತಾಜಿ

ಕಿರಣಗನ್ನಡಿ

ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು,
ಬತ್ತಿಯನಿಕ್ಕಿ ಬರವ ಹಾರುತ್ತಿದೇನೆಲೆಗವ್ವಾ,
ತರಗೆಲೆ ಗಿರುಕ್ಕೆಂದಡೆ ಹೊರಗನಾಲಿಸುವೆ
ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವಾ!
ಲಿಂಗದೇವನ ಶರಣರು ಬಂದು, ಬಾಗಿಲ ಮುಂದೆ ನಿಂದು
'ಶಿವಾ' ಎಂದಡೆ ಸಂತೋಷ ಬಟ್ಟೆನೆಲೆಗವ್ವಾ

ಹೊಲಬುಗೆಟ್ಟ ಶಿಸು ತನ್ನ ತಾಯ ಬಯಸುವಂತೆ;
ಬಳಿದಪ್ಪಿದ ಪಸು ತನ್ನ ಹಿಂಡನರಸುವಂತೆ;
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು.
ಬಯಸುತ್ತಿರ್ದೆನಯ್ಯಾ ನಿಮ್ಮ ಭಕ್ತರ ಬರವನು.
ದಿನಕರನುದಯಕ್ಕೆ ಕಮಲ ವಿಕಸಿತವಾದಂತೆ,
ಎನಗೆ ನಿಮ್ಮ ಶರಣರ ಬರವು ಲಿಂಗದೇವಾ

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9620058492, 9620057562

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ: 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಮಹಾಮನೆಯ ವೈಶಿಷ್ಟ್ಯ

ಬನ್ನಿ ಮಹಾಮನೆಯು ಕೈ ಬೀಸಿ ಕರೆಯುತಿದೆ
ಬಸವ ಸಂತಾನಕೆ ತಾಯ್ಮನೆಯು ನೀಡುತಿದೆ ॥ ಪ ॥
ಮಹಾಮನೆಯ ಭಕ್ತಿ ಸಿರಿ ಅನುಭವ ಮಂಟಪ
ಈ ಜಗದ ಐಸಿರಿ ಅರಿಯಿರಿ ನೀವೆಲ್ಲ ॥ ಅ. ಪ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮಣ್ಣ ಚಿನ್ಮಯ ಚನ್ನಬಸವಣ್ಣ
ನಮ್ಮ ದೊಡ್ಡಪ್ಪ ಅಲ್ಲಮಪ್ರಭುರಾಯ
ಪ್ರೇಮದ ಚಿಕ್ಕಪ್ಪ ಸಿದ್ಧರಾಮ ॥ 1 ॥

ಅಕ್ಕಮಹಾದೇವಿ ಪ್ರೇಮದ ಸೋದರಿ
ಚೊಕ್ಕ ಮಡಿವಾಳಯ್ಯ ಅಕ್ಕರೆಯ ಮಾವ
ಹರಳಯ್ಯ -ಮಧುವಯ್ಯ -ಮೋಳಿಗೆಯ ಮಾರಯ್ಯ ಈ
ಶರಣರೆಮ್ಮಯ ಬಂಧು ಬಳಗ ॥ 2 ॥

ಇಂಥ ಮಹಾಮನೆಯು ಜಗದೊಳೆಲ್ಲೂ ಇಲ್ಲ
ಅಂತೆಲ್ಲ ಧರ್ಮಗಳಲಿ ತಂದೆಯರು ಮಾತ್ರ
ಒಬ್ಬ ಗುರುವಿಗೆ ಅಲ್ಲಿ ಕೆಲವು ಶಿಷ್ಯಂದಿರು
ಬಸವ ಸೂರ್ಯನ ಸುತ್ತ ಶರಣ ಸಂದೋಹ ॥ 3 ॥

ಕಲ್ಯಾಣ ಮಹಾಮನೆಯು ಮರುಹುಟ್ಟು ಪಡೆದಿಹುದು
ಕೂಡಲ ಸಂಗಮದಿ ತಲೆ ಎತ್ತಿ ನಿಂತಿಹುದು
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ವಿಶ್ವಪ್ರೇಮ ಸಾರುತಿಹುದು ॥ 4 ॥

ಹುಟ್ಟಿನಿಂದಲಿ ನೀವು ಏನೇ ಇರಬಹುದು
ಸದ್ಯದ ಗುಣದಲಿ ಹೇಗೇ ಇರಬಹುದು
ಶರಣ ಮೇಳಕೆ ಬರಲು ಪರುಷದ ಸ್ಪರ್ಶ
ಅರಿವಿನ ಹೊನಲಿನಲಿ ಹೊಂದುವಿರಿ ಹರ್ಷ ॥ 5 ॥

ಕೂಡಲ ಸಂಗಮ ಧರ್ಮ ಕ್ಷೇತ್ರದಲ್ಲಿ
ನಡೆಯುತಿಹ ಮೇಳವು ತೌರಿನ ಹಬ್ಬ
ಬಸವ ಕಲ್ಯಾಣದಿ ಶರಣರನು ಸೇರಿಸಿ
ಕಲ್ಯಾಣ ಪರ್ವವು ತರುತಿದೆ ಉಬ್ಬ ॥ 6 ॥

ಮಹಾಮನೆಯ ಐಸಿರಿಯ ನೋಡಲು ಬನ್ನಿ
ವಚನಾಮೃತದ ಬುತ್ತಿಯ ಉಣ್ಣಲು ಬನ್ನಿ
ತತ್ವದ ಜ್ಯೋತಿಗಳು ಬೆಳಗುತಿಹವಿಲ್ಲಿ
ಸಚ್ಚಿದಾನಂದನ ಒಲುಮೆ ಪಡೆಯಲು ಬನ್ನಿ ॥ 7 ॥

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥



866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ತೆರಡನೆಯ

ಶರಣ ಮೇಳ

2009ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೆರಡನೆಯ ಶರಣ ಮೇಳವು 2009ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ

ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ



ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

ಶರಣ ಮೇಳಕೆ ಜೇನನ್ನು ತರುವೆವು ನಾವು ! ಸವಿಯಲು ಬನ್ನಿರಿ ನೀವು !!

ಬಾಳತ್ವಕ್ಕೆಂದು ಮಧುವ ತಂದು
ಗೂಡನು ತುಂಬಿದ ಜೇನ ಹುಳುವಿನಂತೆ
ತಾನುಂಬುದು, ತನ್ನೆಂಜಲ ಜಗವುಂಬುದು ನೋಡಯ್ಯಾ.
ಶಿವಭಕ್ತನಾಗಿ ಶಿವಾನ್ನವನೆ ಕೊಂಡು,
ಒಕ್ಕ ಮಿಕ್ಕ ವಸ್ತುವ ಜಂಗಮಕಿಕ್ಕುವಾತನೆ ಭಕ್ತ;
ಕೊಂಡಾತನೆ ಜಂಗಮ.
ನಡುವೆ ನೀ ಬಂದು ಭಂಡು ಮಾಡದಿರ್ರೈ ,ಲಿಂಗದೇವಾ (ಬ.ವ.ದೀ-1064)

ಜೇನು ಹುಳುಗಳ ಒಂದು ವಿಶೇಷತೆಯೇನೆಂದರೆ ಯಾವಾಗಲೂ ಕ್ರಿಯಾಶೀಲತೆಯಿಂದ ಕಾರ್ಯನಿರತ(Busy)ಯಾಗಿರುತ್ತವೆ. ಅನೇಕ ಜೇನು ನೊಣಗಳು ಗೂಡಿನಿಂದ ಹಾರ್ರಾರಿ ಹೋಗಿ ಹೂವಿನಿಂದ ಮಕರಂದವನ್ನು ಹೀರಿ ಪುನಃ ತನ್ನ ಗೂಡಿಗೆ ಹಿಂದಿರುಗಿ ಆ ಮಕರಂದವನ್ನು ಗೂಡಿನೊಳಗೆ ತುಂಬಿ ಪುನಃ ಮಕರಂದ ಹೀರಲು ಹೋಗುತ್ತವೆ. ಅನೇಕ ಜೇನ್ನೊಣಗಳು ಹೊರ ಹೋಗಿ ಮಧು ತರುವ ಕಾಯಕ ಮಾಡಿದರೆ ರಾಣಿ ಜೇನು ಗೂಡಿನಲ್ಲೇ ಇದ್ದು ಗೂಡನ್ನು ಕಟ್ಟುವ ಕಾಯಕ ಮಾಡುತ್ತಿರುತ್ತದೆ. ಆ ಗೂಡಿಗೆ ರಾಣಿ ಜೇನು ಹುಳುವಿನದ್ದೇ ನೇತೃತ್ವ

ಇದೇ ರೀತಿ ನಮ್ಮ ಬೆಂಗಳೂರು ಬಸವ ಮಂಟಪವೂ ಒಂದು ಜೇನು ಗೂಡಿನಂತಾಗಿದೆ. ಶರಣ ಮೇಳದ ಸಿದ್ಧತೆಗಾಗಿ ಅನೇಕರು ಕಾರ್ಯನಿರ್ವಹಿಸುತ್ತಿದ್ದೇವೆ. ಬಸವ ಮಂಟಪದಲ್ಲಿ ಸೇವೆ ಮಾಡುತ್ತಲೇ ಅಲ್ಲಿಯ ದೃಶ್ಯವನ್ನು ಕಂಡು ಮೈಮರೆತಾಗ ಗುರು ಬಸವಣ್ಣನವರ ಮೇಲಿನ ವಚನ ಹೃದಯದಾಳದಲ್ಲಿ ಪ್ರತಿಧ್ವನಿಸಿತು. ಈಗ ಬೆಂಗಳೂರು ಬಸವ ಮಂಟಪ ಎಂದಿಗಿಂತಲೂ ಹೆಚ್ಚು busyಯಾಗಿದೆ. ಅನೇಕ ಜಂಗಮರು ಶರಣ ಬಂಧುಗಳು ಬಸವ ಮಂಟಪಕ್ಕೆ ಬರುತ್ತಿರುತ್ತಾರೆ ಹೋಗುತ್ತಿರುತ್ತಾರೆ. ದಿನವೂ ಬೆಳಗಾದರೆ ಬೆಳಿಗ್ಗೆ ಬೆಳಿಗ್ಗೆಯೇ ಪೂಜ್ಯ ಶ್ರೀ ಮಾತಾಜಿಯವರು ವಚನಗಳ ಧ್ವನಿ ಮುದ್ರಣಕ್ಕಾಗಿ ಸ್ಟುಡಿಯೋಗೆ ಹೋಗುತ್ತಾರೆ. ಪೂಜ್ಯ ಚೆನ್ನಬಸವಾನಂದ ಸ್ವಾಮೀಜಿಯವರು ಮತ್ತು ಪೂಜ್ಯ ಜ್ಞಾನೇಶ್ವರಿ ಮಾತೆಯವರು ಕಾಣಿಕೆ ಸಂಗ್ರಹಕ್ಕಾಗಿ ಹೋಗುತ್ತಾರೆ. ಶರಣ ಬಸವರಸ ಬ್ಯಾನರ್ ಮತ್ತು ಶರಣರ ಭಾವಚಿತ್ರಗಳನ್ನು ತಯಾರಿಸುವ ಕಾರ್ಯದಲ್ಲಿ ಮಗ್ನರಾಗಿರುತ್ತಾರೆ. ಬಸವ ಚಂದ್ರಿಕೆ ಅಕ್ಷರ ಸಂಯೋಜನೆಯಲ್ಲಿ ಮುಳುಗಿರುತ್ತಾರೆ. ಶಾಂತಕ್ಕನವರು ಬಂದ ಶರಣರಿಗೆ ಉಪಚರಿಸುವ ಕಾಯಕದಲ್ಲಿ ಮಗ್ನವಾಗಿರುತ್ತಾರೆ. ಶರಣ ಶ್ರೀಕಂಠ ಮೂರ್ತಿ, ಶರಣೆ ಲೀಲಾವತಿ, ಶರಣೆ ವಿನೋದಮ್ಮ, ಶರಣೆ ಶ್ರೀದೇವಿ, ಶರಣ ಜಗನ್ನಾಥ, ಶರಣ ವಿರೇಶ, ಶರಣ ಸುರೇಶ ಮತ್ತು ಇತರರು ಇವರೆಲ್ಲ ಮಾರುಕಟ್ಟೆಯಲ್ಲಿ ಮತ್ತು ತಮಗೆ ಪರಿಚಯವಿರುವ ಶರಣ ಬಂಧುಗಳಲ್ಲಿ ಕಾಣಿಕೆ ಹಾಗೂ ದವಸ ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಇನ್ನು ಅನೇಕರು ಅನೇಕ ರೀತಿಯ ಸೇವೆಗಳಲ್ಲಿ ಕಮಲದಲ್ಲಿ ದುಂಬಿ ಮಗ್ನವಾದಂತೆ ಮಗ್ನವಾಗಿರುತ್ತಾರೆ. ರಾತ್ರಿಯಾದಂತೆ ಬಸವ ಮಂಟಪಕ್ಕೆ ಬರುತ್ತಾರೆ. ಜೇನು ಗೂಡಿನಲ್ಲಿ ರಾಣಿ ಜೇನ್ನೊಣ ಹೊರ ಹೋಗುವುದಿಲ್ಲ ಆದರೆ ನಮ್ಮ ಬಸವ ಮಂಟಪದ ರಾಣಿ ಜೇನ್ನೊಣವಾದ ಪೂಜ್ಯ ಮಾತಾಜಿಯವರು ಹೊರ ಹೋಗಿ ಅವರೂ ರಾತ್ರಿ ಬಸವ ಮಂಟಪಕ್ಕೆ ಬಂದಾಗ ಎಲ್ಲಾ ಶರಣ ದುಂಬಿಗಳು ಮಾತಾಜಿಯವರಿಗೆ ಅಂದಿನ ಚಟುವಟಿಕೆಗಳ ವಿವರವನ್ನು ವಿವರಿಸುತ್ತಾರೆ. ರಾಣಿ ಜೇನು ಗೂಡು ಕಟ್ಟುವ ಕಾರ್ಯ ಮಾಡಿದಂತೆ ಮಾತಾಜಿಯವರು ಶರಣ ಮೇಳದ ಕಾರ್ಯಕ್ರಮಗಳ ಯೋಜನೆ, ರೂಪುರೇಷೆಗಳನ್ನು ತಯಾರಿಸುತ್ತಿರುತ್ತಾರೆ. ಹೀಗೆ ಶರಣ ಮೇಳದ ಸಿದ್ಧತೆಯಲ್ಲಿ ತೊಡಗಿರುವ ನಮಗೆ ಕೆಲವೊಮ್ಮೆ ಸಾಯಂಕಾಲ ಲಿಂಗ ಪೂಜೆಗೂ ಸಮಯ ಸಿಗುವುದಿಲ್ಲ.

ಆದರೇನಂತೆ ಸೇವೆಯಲ್ಲಿಯೇ ಮನಸ್ಸಿಗೆ ತುಂಬಾ ಸಡಗರ ಸಂಭ್ರಮ (Excitement) ಆಗುತ್ತಿರುತ್ತದೆ. ಗುರು ಬಸವಣ್ಣನವರು ಸದಾ ಜಂಗಮ ಸೇವೆಯಲ್ಲಿ ಆನಂದ ಹೊಂದುವ ಹೃದಯ ವೈಶಾಲ್ಯ ಉಳ್ಳವರು ಜಂಗಮ ಪ್ರಾಣಿಯಾದವರು. ಅವರ ಮಹಾ ಮನೆಯಲ್ಲಿ ಗಣ ಪರ್ವಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಅಲ್ಲಿಗೆ ಸಡಗರದಿಂದ ಬಂದು ಹೋಗುತ್ತಿದ್ದ ತನ್ನ ಧರ್ಮದ ಅನುಯಾಯಿಗಳಾದ ಅನೇಕ ಜನ ಶರಣರನ್ನು ನೋಡಿ ಅವರಿಗೆ ಅತ್ಯಂತ ಸಂಭ್ರಮವಾಗಿದೆ. ಲಿಂಗ ಪೂಜೆ ಮಾಡಬೇಕೋ ಜಂಗಮರ/ಶರಣರ ಕುಶಲೋಪರಿಯನ್ನು ವಿಚಾರಿಸಬೇಕೋ ಎಂದು

ತಿಳಿಯದೆ ಅತ್ಯಂತ ಸಂಭ್ರಮದ ಮನಸ್ಸಿ (Excited mind)ನಿಂದ "**ನಡುವೆ ನೀ ಬಂದು ಭಂಡು ಮಾಡದಿರ್ರೈ ಲಿಂಗದೇವಾ**"ಎಂದು ನುಡಿದಿದ್ದಾರೆ. ಅಂದರೆ ನನಗೆ ಜಂಗಮ ಸೇವೆಯಲ್ಲಿಯೇ ಹೆಚ್ಚಿನ ಆನಂದವಾಗುತ್ತಿದೆ ಅದಕ್ಕಾಗಿ ನಿನ್ನ ಪೂಜೆಗೆ ಸಮಯ ಸಿಗುತ್ತಿಲ್ಲ ಎಂದು ದೇವರಿಗೆ ಹೇಳುತ್ತಾರೆ.

ಗುರು ಬಸವಣ್ಣನವರು ಮೇಲಿನ ವಚನದಲ್ಲಿ ಎರಡು ತತ್ವಗಳನ್ನು ಹೇಳುತ್ತಿದ್ದಾರೆ. ಒಂದು, ತನ್ನ ಆಹಾರಕ್ಕಾಗಿ ಜೇನ್ನೊಣ ಹೂವಿನಿಂದ ಹೂವಿಗೆ ಹಾರಿ ಮಕರಂದವನ್ನು ಸಂಗ್ರಹಿಸಿದರೂ ಅದು ಉಳಿದಿರುವ ಮಕರಂದವನ್ನು ಜೇನು ತುಪ್ಪವಾಗಿ ಮಾಡಿ ಲೋಕಕ್ಕೆ ಸವಿಯಲು ಕೊಡುತ್ತದೆ. ಅದು ಮಾನವನಿಗೆ ಉಪಕಾರಿಯಾಗಿದೆ. (ಆದರೆ ಮಾನವ ಅದಕ್ಕೆ ಉಪಕಾರಿಯಾಗಿಲ್ಲ!). ಅದೇ ರೀತಿ ಭಕ್ತನು ತನ್ನ ಜೀವನ/ಸಂಸಾರ ನಿರ್ವಹಣೆಗಾಗಿ ಕಾಯಕ ಮಾಡಿದರೂ, ಅದರಿಂದ ಬರುವ ಪ್ರತಿಫಲವನ್ನು ಧರ್ಮದ ಉನ್ನತಿಗಾಗಿಯೂ ಬಳಸಬೇಕು. ಎರಡನೆಯದಾಗಿ ಜಂಗಮನು ದೇವನ ಪ್ರತಿನಿಧಿ, ಭಕ್ತ ಮತ್ತು ಜಂಗಮ(ದ)ನ ಬಾಂಧವ್ಯಗಳು, ಭಕ್ತ ಮತ್ತು ದೇವನ ಬಾಂಧವ್ಯಗಳಿಗಿಂತಲೂ ಗಾಢವಾಗಿರಬೇಕು ಮತ್ತು ಅನೋನ್ಯವಾಗಿರಬೇಕು ಎನ್ನುತ್ತಾರೆ. ನಾವಿಬ್ಬರು (ಭಕ್ತ ಮತ್ತು ಜಂಗಮ) ನಿನ್ನ ಸೇವೆಯಲ್ಲಿ ತುಂಬಾ ಕಾರ್ಯನಿರತ(busy)ಯಾಗಿದ್ದೇವೆ ನಮ್ಮಿಬ್ಬರ ಮಧ್ಯೆ ಬಂದು ನೀನು ತೊಂದರೆ(Disturb) ಮಾಡಬೇಡ ಎನ್ನುತ್ತಾರೆ.

ಬೆಂಗಳೂರು ಮಾತ್ರವಲ್ಲದೆ ಇನ್ನೂ ಅನೇಕ ಬಸವ ಮಂಟಪಗಳಲ್ಲಿ ಇಂಥ ಸಂಭ್ರಮದ ವಾತಾವರಣವನ್ನು ಕಾಣಬಹುದು. ಎಲ್ಲಾ ಶರಣರು ಒಬ್ಬೊಬ್ಬರು ಒಂದೊಂದು ರೀತಿಯ ಸೇವೆಯನ್ನು ಮಾಡುತ್ತಿರುತ್ತಾರೆ. ಅದು ಹೊಸ ವಚನಗಳ ಕೆಸೆಟ್ ತಯಾರಿಕೆಯಾಗಿರಬಹುದು, ಹೊಸ ಪುಸ್ತಕಗಳ ರಚನೆ/ಮರು ಮುದ್ರಣವಾಗಿರಬಹುದು, ಮಾರುಕಟ್ಟೆಯಲ್ಲಿ ಪ್ರಚಾರ ಮಾಡಿ ದವಸ ಧಾನ್ಯ,ಕಾಣಿಕೆ, ಇತ್ಯಾದಿಗಳನ್ನು ಸಂಗ್ರಹಿಸುವ ಕಾರ್ಯವಾಗಿರಬಹುದು, ಒಟ್ಟಾರೆ ನಮ್ಮ ಶರಣ ದುಂಬಿಗಳೆಲ್ಲಾ ತುಂಬಾ busyಯಾಗಿದ್ದಾರೆ. ಇಂಥ ಸಂಭ್ರಮದಲ್ಲಿ ಮುಳುಗಿರುವ ಎಲ್ಲರನ್ನೂ ನೋಡುವುದೇ ಒಂದು ರೀತಿಯ ಹರ್ಷದಾಯಕವಾಗಿರುತ್ತದೆ.

ಶಿವಶರಣ ದುಂಬಿಗಳು ಭವದೊಳಗೆ ಹಾರ್ರಾರಿ।
ಶಿವ ಮತದ ಹುಟ್ಟ ಕಟ್ಟಿದವು ।ವಚನಗಳು
ಸವೆಯದೆ ಉಳಿದಿರುವ ಸವಿಜೇನು ॥

ಕಲ್ಯಾಣ ಕ್ರಾಂತಿ ನಂತರ ಶರಣರು ಧರ್ಮವನ್ನು ಉಳಿಸಿರುವ ಬೆಳೆಸಿರುವ ಬಗೆಯನ್ನು ಜನಪದರು ಈ ರೀತಿ ಹೇಳಿದರೂ, ಈ ಮಾತು ಇಂದಿಗೂ ಬಸವ ಧರ್ಮದ ಪುನರುತ್ಥಾನದಲ್ಲಿ ತೊಡಗಿರುವ ಎಲ್ಲರಿಗೂ ಅನ್ವಯವಾಗುತ್ತದೆ.

ಪ್ರತಿ ವರ್ಷ ಶರಣ ಮೇಳ ಬಂದಾಗ, ಪೂಜ್ಯಮಾತಾಜಿಯವರು ಮತ್ತು ಅನೇಕ ಶರಣ ದುಂಬಿಗಳು ಅನುಭಾವ, ಜ್ಞಾನದ ಜೇನನ್ನು ತುಂಬಿಕೊಂಡು ಶರಣ ಮೇಳಕ್ಕೆ ಆಗಮಿಸುತ್ತಾರೆ.ಈ ಬಾರಿಯ ಶರಣ ಮೇಳಕ್ಕೂ ಎರಡು ಹೊಸ ಗ್ರಂಥಗಳು ಮತ್ತು ವಚನ ಗಾಯನದ ನಾಲ್ಕು ಹೊಸ ಧ್ವನಿಸುರುಳಿಗಳೆನ್ನುವ ಸಿಹಿ ಜೇನಿನೊಂದಿಗೆ ಮಾತಾಜಿಯವರು ಆಗಮಿಸುತ್ತಿದ್ದಾರೆ. ಪೂಜ್ಯ ಗಂಗಾ ಮಾತಾಜಿಯವರಂತೂ ನಾಡಿನಾದ್ಯಂತ ಸಂಚರಿಸಿ ಶರಣ ದುಂಬಿಗಳೊಡನೆ ಶರಣ ಮೇಳಕ್ಕೆ ಬರುತ್ತಾರೆ. ಕೊನೆಗೆ ಎಲ್ಲರೂ ತಂದಿರುವ ಮಕರಂದವನ್ನು ಮಾತಾಜಿಯವರೆನ್ನುವ ರಾಣಿ ಜೇನಿನ ನೇತೃತ್ವದಲ್ಲಿ ಶರಣ ಮೇಳ ಎನ್ನುವ ಜೇನು ಗೂಡಿನಲ್ಲಿ ತುಂಬುವ ಕಾರ್ಯ ನಡೆಯುತ್ತದೆ. ಅದಕ್ಕಾಗಿ ರಾಣಿ ಜೇನಿನ ನೇತೃತ್ವದಲ್ಲಿ ಶರಣ ಮೇಳಕ್ಕೆ ಜೇನನ್ನು ತರುವೆವು ನಾವು! ಅದನ್ನು ಸವಿಯಲು ಬೇಗ ಬೇಗ ಬನ್ನಿ ಎಲ್ಲಾ ನೀವು!!

ಶರಣು ಶರಣಾರ್ಥಿಗಳೊಂದಿಗೆ -ಮರಿದುಂಬಿ

ನಚ್ಚು ಮೆಚ್ಚಿನ ಶರಣರೆನ್ನ ಕಣ್ಣಮುಂದೆ ಬಂದು ನಿಂದಿರಲು
ಎನ್ನ ತನುವ ಬಗೆದು ತನುವಿನೊಳಗಿಂಬಿಟ್ಟುಕೊಂಬೆನು.
ಎನ್ನ ಮನವ ಬಗೆದು ಮನದೊಳಗಿಂಬಿಟ್ಟುಕೊಂಬೆನು.
ಎನ್ನ ಕಂಗಳು ಬಗೆದು ಕಂಗಳೊಳಗಿಂಬಿಟ್ಟುಕೊಂಬೆನು.
ಲಿಂಗದೇವನ ಶರಣರೆನ್ನ ಒಡೆಯರಾಗಿ ಎನ್ನ ಮನೆಗೆ ಬಂದಡೆ
ಭಕ್ತಿಯ ಮಾಡುವೆನು ಕಾಣಾ ಅಪ್ಪಣ್ಣಾ.

ಯಾರು ನನ್ನವರು ಈ ಲೋಕದೊಳಗೆ?

-ಸಚ್ಚಿದಾನಂದ ಚಟನಳ್ಳಿ

ಆದಿಯಲಾಗಲಿ, ವೇದದಲಾಗಲಿ, ಶಾಸ್ತ್ರದಲಾಗಲಿ, ಸಮಯದಲಾಗಲಿ;
ಎನ್ನವರೆನ್ನೆನು ಎನ್ನವರೆನ್ನೆನು!
ಎನ್ನವರೆಂದಡೆ, ಸಂಗಾ ನಿಮ್ಮಲಿಗೆ ದೂರ!
ಎನ್ನವರಾದಡೆ ಜನ್ನಕ್ಕೆ ನಡೆವರೆ?
ಎನ್ನವರಲ್ಲ, ಕೂಡಲ ಸಂಗಮದೇವಾ (ಬ.ವ.ದೀ-710)

ಅತ್ಯಂತ ಶ್ರೇಷ್ಠವಾದ, ಉದಾತ್ತವಾದ ಲಿಂಗಾಯತ ಧರ್ಮದ ಶರಣ ಪರಂಪರೆಯವರಾದ ನಾವು, 12ನೇ ಶತಮಾನದ ಶರಣರಂತೆ ಆಗುವಲ್ಲಿ ಎಲ್ಲೋ ತಪ್ಪುತ್ತಿದ್ದೇವೆ ಎಂದು ನನಗನಿಸುತ್ತಿದೆ. 12ನೇ ಶತಮಾನದ ಶರಣರ ನುಡಿಯನ್ನು ಕೇಳಿ ಸಂತೋಷ ಪಡುತ್ತಿದ್ದೇವೆಯೇ ಹೊರತು ಅವರ ನಡೆಯನ್ನು ಅನುಕರಣೆ ಮಾಡುವಲ್ಲಿ ವಿಫಲರಾಗಿದ್ದೇವೆ ಎನಿಸುತ್ತಿದೆ. ಹೀಗಾಗಬಾರದು ನಾವು ಧರ್ಮಗುರು ಬಸವಣ್ಣನವರ ಹಾಗು ಆದಿ ಶರಣರ ನಡೆಯನ್ನೂ ಅಳವಡಿಸಿಕೊಳ್ಳಬೇಕು. ಅಂದು ಗುರು ಬಸವಣ್ಣನವರು, ಬಂಧು ಬಳಗದವರು ಬಂದರೆ ಸಮಯವಿಲ್ಲ ಎಂದು, ಶರಣರು ಬಂದರೆ ಗುಡಿ ತೋರಣವ ಕಟ್ಟಿ ಸ್ವಾಗತಿಸಿ ಎನ್ನುತ್ತಿದ್ದರು. "ಆದಿಯಲಾಗಲಿ (ಹುಟ್ಟಿನಿಂದ ಸಂಬಂಧವಿರುವವರ) ವೇದ, ಶಾಸ್ತ್ರ ಅಧ್ಯಯನದಿಂದ ಸಂಬಂಧ ಇರುವವರನ್ನು, ಸಮಯದಲ್ಲಿ-ಹುಟ್ಟಿದ ಧರ್ಮದಿಂದ ಸಂಬಂಧವಿರುವವರನ್ನು ನನ್ನವರು ಎನ್ನಲಾರೆ" ಎನ್ನುತ್ತಾರೆ ಗುರು ಬಸವಣ್ಣನವರು. ಅವರು ಅನೇಕ ವಚನಗಳನ್ನು ತಮಗೆ ಸಂಬಂಧಿಸಿಕೊಂಡು ಹೇಳಿದರೂ ಅವುಗಳು ನಮಗಾಗಿಯೇ ಹೇಳಲ್ಪಟ್ಟಿವೆ. ಗುರು ಬಸವಣ್ಣನವರು ಸಮಾಜವನ್ನು ತಿದ್ದಲು, ಬಳಸಿರುವ ಭಾಷೆಯ ಪರಿ ಅದು. "ಎನ್ನವರಾದಡೆ ಜನ್ನಕ್ಕೆ ನಡೆವರೆ?" ನಾವು ಇಷ್ಟಲಿಂಗ ಧಾರಿಯಾದ ಶರಣರು, ಬಸವ ಮಾರ್ಗದಲ್ಲಿ ನಡೆಯುತ್ತಿದ್ದೇವೆ ಯಾರನ್ನು ನಾವು ನನ್ನವರೆನ್ನಬೇಕು. ಇದೇ ಪಥದಲ್ಲಿ ನಡೆವವರನ್ನು ಮಾತ್ರ ನನ್ನವರೆನ್ನಬೇಕು. ಅವರೇ ನಮಗೆ ಬಂಧುಗಳು. ಅಕ್ಕಮಹಾದೇವಿ ತಾಯಿಯವರು "ಎಳೇಳು ಜನ್ಮದಲ್ಲಿ ಶಿವಭಕ್ತರೇ ಬಂಧುಗಳೆನಗೆ" ಎನ್ನುತ್ತಾರೆ. ಹಾಗೆಯೇ ಭಕ್ತರೇ ನಮ್ಮ ಬಂಧು ಬಳಗ ಎಂದು ತಿಳಿದು ಕೊಳ್ಳಬೇಕು. ಜನ್ನ ಎಂದರೆ ಯಜ್ಞ. ಎನ್ನವರದಾಡೆ ಯಜ್ಞ (ಹೋಮ, ಹವನ) ಮಾಡುತ್ತಾರೆಯೇ? ಎಂದು ಕೇಳುತ್ತಾರೆ. ನಮ್ಮ ರಕ್ತ ಸಂಬಂಧಿಗಳು ಅನೇಕರು ಇನ್ನೂ ಬಸವ ಮಾರ್ಗಕ್ಕೆ ಬಂದಿರುವುದಿಲ್ಲ ಕೇವಲ ಹೆಸರಿಗೆ ಮಾತ್ರ ಲಿಂಗಾಯತರಾಗಿರುತ್ತಾರೆ. ಇಂಥವರು, ಗೃಹ ಪ್ರವೇಶ ಮಾಡುವಾಗ ಹೋಮ ಮಾಡುವುದಲ್ಲದೆ, ಗುರು-ಲಿಂಗ-ಜಂಗಮಕ್ಕೆ ಹೊರತಾಗ ಪೂಜೆಗಳನ್ನು ಮಾಡಿಸುತ್ತಾರೆ. ಆಗ ನಮ್ಮನ್ನೂ ಕೂಡ ಕರೆಯುತ್ತಾರೆ ಎಂದುಕೊಳ್ಳಿ. ಆಗ ಲಿಂಗಪಥದಲ್ಲಿ ನಡೆಯುವ ನಮ್ಮ ಕರ್ತವ್ಯವೇನು? ನಮ್ಮಿಂದ ಸಾಧ್ಯವಾದರೆ ಅವರಿಗೆ ತಿಳಿ ಹೇಳಿ ಇಂಥ ಮೂಢಾಚರಣೆಗಳನ್ನೆಲ್ಲಾ ಮಾಡಬಾರದು ಶರಣ ಸಂಸ್ಕೃತಿಯ ಪ್ರಕಾರ ಬಸವೇಶ್ವರ ಪೂಜಾವ್ರತ ಮಾಡಿ ಎಂತೆಲ್ಲಾ ಹೇಳಬೇಕು. ಕೇಳಿದರೆ ಸರಿ, ಇಲ್ಲ ಎಂದರೆ ಅಂಥವರ ಮನೆಗೆ ಹೋಗಬಾರದು ಎನ್ನುವುದು ಧರ್ಮಪಿತರ ಆಜ್ಞೆ ಇದೆ.

ಏಕೆಂದರೆ ಅವರು ಅನ್ಯದೈವ ಭಜಿಸುತ್ತಾರೆ. ಲಿಂಗಭಕ್ತನಾದವನು ಅನ್ಯ ದೈವದ ಪ್ರಸಾದ ತಿನ್ನಲಾಗದು.

ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಭವಿಯೊಡನೆ ಸಂಗವು ಭಂಗವೆಂದರಿಯರು
ಭವಿಯೊಡನೆ ಸಂಗವ ಮಾಡುವವರು
ಕೂಡಲ ಚೆನ್ನಸಂಗಯ್ಯ ಅಪರತ್ತಲೂ ಇಲ್ಲ ಇತ್ತಲೂ ಇಲ್ಲ. (ಚೆ.ಬ.ವ.-34)

ಕೋತಿ ತಾನು ಕೆಡುವುದಲ್ಲದೆ ವನವೂ ಕೂಡ ಕೆಡಿಸುತ್ತದೆ ಎನ್ನುವಂತೆ ಅರೆ ಭಕ್ತರಾದವರು ಅನೇಕ ಸಲ ಆಗಲೇ ನಿಜ ಭಕ್ತಿ ಮಾರ್ಗದಲ್ಲಿ ನಡೆಯುವವರ ನಂಬಿಕೆಯನ್ನು ಅಲ್ಲಾಡಿಸುತ್ತಾರೆ. ಅದಕ್ಕಾಗಿಯೇ ಗುರುಬಸವಣ್ಣನವರು "ಅರೆ ಭಕ್ತರಾದವರ ನೆರೆಬೇಡ, ಹೊರೆಬೇಡ ದಾರಿಸಂಗ ಬೇಡ ದೂರ ನುಡಿಯಲು ಬೇಡ," ಎಂದು ಹೇಳಿದ್ದಾರೆ. ಆದಕ್ಕಾಗಿ ಅನ್ಯ ದೈವ ಭಜಿಸುವವರ, ಹೋಮ ಹವನ, ಲಕ್ಷ್ಮಿ, ಸತ್ಯನಾರಾಯಣ, ಪೂಜಾ ವ್ರತಗಳನ್ನು ಮಾಡುವಂಥವರ ಮನೆಗೆ ಹೋಗಬಾರದು. ಏಕೆಂದರೆ ಅಂಥವರ ಮನದಲ್ಲಿ ಮತ್ತು ಮನೆಯಲ್ಲಿ ಲಿಂಗದೇವನು ಇರಲಾರ. ಲಿಂಗದೇವನಿರದವರ ಮನೆಗೆ ಹೋಗುವುದು ಗುರುಬಸವಣ್ಣನವರಿಗೆ ಸಮ್ಮತವಲ್ಲ.

ಒಡೆಯರಿಲ್ಲದ ಮನೆಯ ತುಡುಗುಣಿ ನಾಯಿ ಹೊಗುವಂತೆ,
ನೀನಿಲ್ಲದವರ ಮನೆಯ ಹೊಗೆನು; ಸಂಗಯ್ಯಾ
ಶ್ವಪಚೋಪಿಗಳಾಗಳಲ್ಲಿ ಲಿಂಗದೇವಯ್ಯ,ನೀನಿದ್ದವನೇ ಕುಲಜನು.

ಶ್ವಪಚೋಪಿಯೆಂದರೆ ಶೂದ್ರ, ವರ್ಣಾಶ್ರಮ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿಯನ್ನು ಶೂದ್ರನೆಂದು ಕರೆದರೂ ಅವನು ಲಿಂಗಧಾರಿಯಾದರೆ ಅವನು ಶೂದ್ರನಲ್ಲ ಅವನೇ ಕುಲಜನು. ಅಂಥವನ ಮನೆಯ ಪ್ರಸಾದ ಎನಗಮೃತಾರೋಗಣೆ ಎನ್ನುತ್ತಾರೆ ಗುರುಬಸವಣ್ಣನವರು. ಸ್ವಜಾತಿಯವರೆಂದು ತಿಳಿದು ಗುರುಬಸವಣ್ಣನವರು ಯಾವುದೇ ಬ್ರಾಹ್ಮಣರ ಮನೆಯಲ್ಲಿ ಪ್ರಸಾದ ಮಾಡಿಲ್ಲ. ಇದು ಯಾವ ಕಾವ್ಯಗಳಲ್ಲಿಯೂ ಪ್ರಸ್ತಾವನೆಯೂ ಆಗಿಲ್ಲ. ಆದರೆ ವರ್ಣಾಶ್ರಮ ವ್ಯವಸ್ಥೆಯಲ್ಲಿ ಅಸ್ಪೃಶ್ಯರೆಂದು ಕರೆಯಲ್ಪಟ್ಟಿದ್ದ ಕಂಬಳಿನಾಗಿದೇವ, ಸಮಗಾರ ಹರಳಯ್ಯನವರ ಮನೆಯಲ್ಲಿ ಗುರು ಬಸವಣ್ಣನವರು ಪ್ರಸಾದ ಮಾಡಿದ್ದಾರೆ ಇದು ಅನೇಕ ಕಾವ್ಯಗಳಲ್ಲಿಯೂ ಬಂದಿದೆ. ಗುರು ಬಸವಣ್ಣನವರು ಕಂಬಳಿನಾಗಿದೇವನ ಮನೆಯಲ್ಲಿ ಪ್ರಸಾದ ಮಾಡಿದಾಗ ಕೊಂಡೆಗಳು ಬಿಜ್ಜಳನಿಗೆ ಛಾಡಿಯನ್ನು ಹೇಳಿದರು. ಆಗ ಬಿಜ್ಜಳನು ಬಸವಣ್ಣನವರನ್ನು ಕರೆಸಿ ವಿಚಾರಿಸಿರುವ ಘಟನೆ ಹರಿಹರನ ರಗಳೆಯಲ್ಲಿ ತುಂಬಾ ಚೆನ್ನಾಗಿ ಪ್ರಸ್ತಾವನೆಯಾಗಿದೆ. "ಏನು ಬಸವಣ್ಣನವರೇ ನೀವು ಹೊಲೆಯರ ಮನೆಯಲ್ಲಿ ಊಟ ಮಾಡಿದಿರಂತೆ?" ಎಂದು ಬಿಜ್ಜಳ ಕೇಳಿದ. ಆಗ ಗುರುಬಸವಣ್ಣನವರು "ನಾರಯಣ ಕ್ರಮಿತರ ಕೇರಿಯಂ ಪೊಕ್ಕೆನೆ? ಮುಕುಂದಭಟ್ಟರ ಮನೆಯೊಳುಂಡೆನೆ ಸಾರಪೆದ್ದಿಗಳ ಸಾರಿ ನಿಂದೆನೆ? ಹರನರಿಯದ ಹೊಲೆಯರ ಮನೆಯ ಹೊಕ್ಕುಂಡುದಿಲ್ಲ" ಎಂದರು. ಆದಕ್ಕಾಗಿ ಬಸವ ಮಾರ್ಗದಲ್ಲಿ ನಡೆವ ನಾವು ಶರಣರೊಡನೆ ಸಂಬಂಧ ಇಟ್ಟುಕೊಳ್ಳಬೇಕೆ ಹೊರತು ರಕ್ತ ಸಂಬಂಧಿಗಳೊಡನೆ ಅಲ್ಲ.

ಶಿವಜನ್ಮ ಶಿವಕುಲಜನಾಗಿ ಶರಣರ ಮನೆಯ ಒಕ್ಕುದ ಕೊಂಬುದು.
ಭವಭಾರಿಯ ಮನೆಯಲು ಲಿಂಗಾರ್ಚನೆಯ ಮಾಡಲಾಗದು
ಭವಿ ವಿರಹಿತಂ, ಭವಿ ಪಾಕವ ತನ್ನ ಲಿಂಗಕ್ಕೆ ಕೊಟ್ಟೊಡೆ
ರೌರವ ನರಕ ನೋಡಾ, ಇದುಕಾರಣ
ಕೂಡಲ ಚೆನ್ನಸಂಗಯ್ಯ ಭವಿಯ ಸಂಗ ಪುನರಪಿ ಜನ್ಮ.

ಭವಿಯ ಸಂಗದಿಂದ ನಮೂಗೂ ಭವ ಬರುತ್ತದೆ ಅದಕ್ಕಾಗಿ ಲಿಂಗ ಸಂಗಿಗಳ ಸಂಗದಲ್ಲಿಯೇ ಶರಣನು ಇರಬೇಕು. 12ನೇ ಶತಮಾನದಲ್ಲಿ ಶರಣರು ಅತ್ಯಂತ ಕಟ್ಟು ನಿಟ್ಟಾಗಿ ಧರ್ಮಪಾಲನೆ ಮಾಡಿದುದರಿಂದಲೇ ಅವರು ಜ್ಞಾನಿಗಳಾದರು. ಒಂದು ಗಿಡವು ಗಿಡ ಎನಿಸಿಕೊಳ್ಳಬೇಕಾದರೆ ಎಲೆ, ರೆಂಭೆಗಳು, ಕಾಂಡ ಮತ್ತು ಬೇರು ಬೇಕು. ಇವುಗಳಲ್ಲಿ ಎಲ್ಲಕ್ಕಿಂತ ಮುಖ್ಯವಾಗಿರುವುದು ಬೇರು, ಎಲೆ, ರೆಂಭೆ ಇಲ್ಲದಿದ್ದರೂ ಗಿಡ ಎನಿಸಿಕೊಳ್ಳುತ್ತದೆ ಆದರೆ ಬೇರಿಲ್ಲದಿದ್ದರೆ ಗಿಡ ಎನಿಸಿಕೊಳ್ಳದು. ಅದೇ ರೀತಿ ಇಷ್ಟಲಿಂಗ ಲಿಂಗಾಯತ ಧರ್ಮದ ಬೇರು. ಅದಿಲ್ಲದೆ ಲಿಂಗವಂತನೆನಿಸಿಕೊಳ್ಳಲಿಕ್ಕಾಗದು. ಲಿಂಗವಿಲ್ಲದೆ ಏನೂ ಮಾಡಲಾಗದು.

> ಲಿಂಗವಿಲ್ಲದೆ ನಡೆವನ, ಲಿಂಗವಿಲ್ಲದೆ ನುಡಿವನ, ಲಿಂಗವಿಲ್ಲದವನಂಗ ಸೂತಕ.
> ಲಿಂಗವಿಲ್ಲದವನಂಗ ಲೌಕಿಕ, ಮುಟ್ಟಲಾಗದು.
> ಲಿಂಗವಿಲ್ಲದೆ ಗಮಿಸಿದೊಡೆ ಆ ನಡೆನುಡಿಗೊಮ್ಮೆ ಪಾತಕ.
> ಲಿಂಗವಿಲ್ಲದೆ ನುಡಿವ ಶಬ್ದವ ಕೇಳಲಾಗದು, ಶಿವಾ ಶಿವಾ
> ಲಿಂಗವಿಲ್ಲದೆ ಉಗುಳ ನುಂಗಿಡಡೆ ಕಿಲ್ಬಿಷ ಕೂಡಲ ಚೆನ್ನಸಂಗಮದೇವಾ.

ಲಿಂಗದೀಕ್ಷೆ ಇನ್ನೂ ಯಾರು ತೆಗೆದುಕೊಂಡಿಲ್ಲವೋ ಅಂಥವರಿಗೆ ದೀಕ್ಷೆ ತೆಗೆದುಕೊಳ್ಳಿ ಎಂದು ಹೇಳುವ ನೈತಿಕ ಹಕ್ಕು ನಮಗಿದೆ.

> ಅಣ್ಣ, ತಮ್ಮ, ಹೆತ್ತಪ್ಪ, ಗೋತ್ರವಾದಡೇನು?
> ಲಿಂಗ ಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ.
> ನಂಟು-ಭಕ್ತಿನಾಯಕ ನರಕ, ಲಿಂಗದೇವಾ! (ಬ.ವ.ದೀ.-710)

ಜನ್ಮ ಕೊಟ್ಟ ತಾಯಿ ತಂದೆಯರೇ ಇರಲಿ, ಒಡ ಹುಟ್ಟಿದ ಅಣ್ಣ-ತಮ್ಮ, ಅಕ್ಕ-ತಂಗಿಯರೇ ಇರಲಿ, ಒಡಲಲ್ಲಿ ಹುಟ್ಟಿದ ಮಕ್ಕಳೇ ಇರಲಿ ಅಥವಾ ಒಂದೇ ಜಾತಿ ಗೋತ್ರಕ್ಕೆ ಸಂಬಂಧಿಸಿದ ಬಂಧುಗಳೇ ಇರಲಿ, ಲಿಂಗ ಸಾಹಿತ್ಯವಿಲ್ಲದಿದ್ದರೆ, ಅವರು ಇಷ್ಟಲಿಂಗ ದೀಕ್ಷೆ ಹೊಂದದೇ ಹೋದರೆ ಅಂಥವರನ್ನು ನನ್ನವರು ಎನಲಾಗದು. ಅವರಿಗೂ ಇಷ್ಟಲಿಂಗ ದೀಕ್ಷೆ ತೆಗೆದುಕೊಳ್ಳಲು ಪ್ರೇರೇಪಿಸಬೇಕು. ತೆಗೆದುಕೊಳ್ಳದಿದ್ದರೆ, ಅಂಥವರೊಂದಿಗೆ ಯಾವುದೇ ಸಂಬಂಧ ಇಟ್ಟುಕೊಳ್ಳಬಾರದು. ನಂಟು ಭಕ್ತಿನಾಯಕ ನರಕ. ಇಲ್ಲಿ ತಾವೊಂದು ಪ್ರಶ್ನೆ ಕೇಳಬಹುದು. ಕೊಡುವ ತೆಗೆದುಕೊಳ್ಳುವ ವ್ಯವಹಾರಗಳಿರುತ್ತವೆ, ನೆಂಟರೊಂದಿಗೆ ಸಂಬಂಧ ಇಟ್ಟುಕೊಳ್ಳದೇ ಹೋದರೆ ಹೇಗೆ? ಎಂದು. ಅದಕ್ಕಾಗಿ ಭಕ್ತಿ ಸಂಬಂಧದಲ್ಲಿಯೇ ರಕ್ತ ಸಂಬಂಧಗಳನ್ನು ಕೂಡ ಬೆಳೆಸಬೇಕು. ಏಕೆಂದರೆ ಭಕ್ತಿ ಮಾರ್ಗದಲ್ಲಿ ನಡೆವವರಿಗೆ ಶರಣರೇ ಸರ್ವಸ್ವ

> ಮನದೈವ, ಕುಲದೈವ ಎನಗೆ ನಿಮ್ಮವರಯ್ಯಾ
> ತನು ಮೀಸಲು ಮನ ಮೀಸಲು, ನಯನ ಮೀಸಲು ಎನ್ನ
> ಲಿಂಗದೇವಾ ನಿಮ್ಮ ಶರಣರಿಗೆ.

ಶರಣರು ಹಾಗೂ ಭಕ್ತಿ ಸಂಬಂಧಿಗಳು ನಿಸ್ವಾರ್ಥಿಗಳಾಗಿ ನಮಗೆ ಸದಾ ಲೇಸನ್ನು ಬಯಸುತ್ತಾರೆ. ಆದರೆ ರಕ್ತ ಸಂಬಂಧಿಗಳು ಹಾಗಲ್ಲ, ಅನೇಕ ರಕ್ತ ಸಂಬಂಧಿಗಳಿಗೆ ನಮ್ಮ ಏಳಿಗೆ ಅಭಿವೃದ್ಧಿ ಸಹಿಸಲಿಕ್ಕಾಗುವುದಿಲ್ಲ. ಅವರು ನಮ್ಮ ಹಿತೈಷಿಗಳಲ್ಲ, ಹಿತೈಷಿಗಳಂತೆ ಮುಖವಾಡ ಹಾಕಿರುತ್ತಾರೆ ಅಷ್ಟೆ, ನಮ್ಮಿಂದ ಸಾಧ್ಯವಾದಷ್ಟು ಕಿತ್ತುಕೊಳ್ಳಲಿಕ್ಕೆ ನೋಡುತ್ತಾರೆ. ಅವರ

ಪ್ರತಿಯೊಂದು ಸಹಾಯದ ಹಿಂದೆ ಸ್ವಾರ್ಥ ತುಂಬಿ ತುಳುಕುತ್ತಿರುತ್ತದೆ.

> ಬಂಧುಗಳು ಆದವರು ಬಂದುಂಡು ಹೋಗುವರು
> ಬಂಧನವ ಕಳೆಯಲು ಅರಿಯರು। ಗುರುವಿಂದ
> ಬಂಧುಗಳು ಉಂಟೇ ಸರ್ವಜ್ಞ?॥

"ಅನ್ನವ ತನ್ನಲಿರುವತನಕ ಎಲ್ಲರೂ ನನ್ನವರೆನ್ನುವರು ಅನ್ನವ ತನ್ನಲಿ ತೀರಿದ ಮರುದಿನವೇ ನನ್ನವರನ್ನುವರಾರಿಲ್ಲ" ಎನ್ನುವ ಒಂದು ಪ್ರಸಿದ್ಧ ಗೀತೆಯಿದೆ. ಇದು ರಕ್ತ ಸಂಬಂಧಿಗಳ ಬಗ್ಗೆಯೇ ಬರೆದುದಾಗಿದೆ. ಒಬ್ಬ ವ್ಯಕ್ತಿಯಲ್ಲಿ ಸಂಪತ್ತು ಇರುವವರೆಗೆ ಸಕ್ಕರೆಗೆ ಇರುವೆ ಮುತ್ತಿದಂತೆ ಅವನ ಸುತ್ತ ಬಂಧುಗಳು ಮುತ್ತಿರುತ್ತಾರೆ. ಶರಣರ ಪ್ರಕಾರ ಆಪತ್ತಿಗಾದವನೇ ನಿಜವಾದ ನಂಟ,

> ಒಲ್ಲೆನಯ್ಯಾ, ಒಲ್ಲೆನಯ್ಯಾ, ನಿಮ್ಮವರಲ್ಲದವರ;
> ಒಲ್ಲೆನಯ್ಯಾ, ಒಲ್ಲೆನಯ್ಯಾ, ಜಗವೆಲ್ಲರಿಯಲು;
> ಒಲ್ಲೆನಯ್ಯಾ, ಒಲ್ಲೆನಯ್ಯಾ, ನೀ ಮುನಿದಡೆ ಮುನಿ,
> ಲಿಂಗದೇವ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. (ಬ.ವ.ದೀ-709)

ಲಿಂಗದೇವನನ್ನು ಧರಿಸಿ ಯಾರು ಅರ್ಚಿಸುವುದಿಲ್ಲವೊ ಅವರನ್ನು ನಾನೊಲ್ಲೆ ಎನ್ನುತ್ತಾರೆ ಗುರುಬಸವಣ್ಣನವರು. ಅವರ ಸಂತತಿಯುವರಾದ ನಾವು ಇಂಥ ಗುಣಗಳನ್ನು ಅಳವಡಿಸಿಕೊಳ್ಳದಿದ್ದರೆ ಗುರುಬಸವಣ್ಣನವರು ನಮ್ಮನ್ನೂ ದೂರ ಇಡುತ್ತಾರೆ.

ಅಕ್ಕಮಹಾದೇವಿ ತಾಯಿಯವರು ಹುಟ್ಟಿದ್ದು ಊರಿಗೆ ಶ್ರೀಮಂತನಾಗಿದ್ದ ಓಂಕಾರ ಶೆಟ್ಟಿಯವರ ಮನೆಯಲ್ಲಿ. ಉಣಲಿಕ್ಕೆ ಉಡಲಿಕ್ಕೆ, ಆಭರಣಗಳಿಗೆ ಮತ್ತು ಬಂಧು, ಬಳಗ ನೆಂಟರು ಯಾವುದಕ್ಕೂ ಕೊರತೆ ಇರಲಿಲ್ಲ. ಆದರೂ ಅವರು "ಆಡುವುದು ಹಾಡುವುದು, ಹೇಳುವುದು ಕೇಳುವುದು ನಡೆವುದು ನುಡಿವುದು, ಸರಸ ಸಮ್ಮೇಳನವಾಗಿಪ್ಪುದಯ್ಯಾ ಶರಣರೊಡನೆ. ಚೆನ್ನಮಲ್ಲಿಕಾರ್ಜುನಯ್ಯಾ ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ ಲಿಂಗ ಸುಖಿಗಳ ಸಂಗದಲ್ಲಿ ದಿನಗಳೆವೆನು" ಎಂದು ಶರಣರನ್ನು ಹುಡುಕಿಕೊಂಡುಬಸವ ಕಲ್ಯಾಣದ ಅನುಭಾವ ಮಂಟಪಕ್ಕೆ ಕಾಲ್ನಡಿಗೆಯಲ್ಲಿ ಬಂದರು. ಅವರು ಯಾವ ರಕ್ತ ಸಂಬಂಧಿಗಳ ಹಂಗಿಗೂ ಒಳಗಾಗಲಿಲ್ಲ. ಅವರಿಗೆ ಶರಣರೇ ತಾಯಿ ತಂದೆ, ಅಣ್ಣ ತಮ್ಮ ಅಕ್ಕ ತಂಗಿ ಎಲ್ಲವೂ! ನಾವು ಕೂಡ ಇಂಥ ಮನೋಭಾವನೆಯನ್ನು ಬೆಳೆಸಿಕೊಂಡು ಶರಣರನ್ನು ಆದರಿಸುವ ಅವರೊಡನೆ ಆತ್ಮೀಯತೆಯಿಂದ ಬೆರೆಯುವ ಸದ್ಗುಣಗಳನ್ನು ಬೆಳೆಸಿಕೊಂಡು ಬಸವಾದಿ ಶರಣರು ಮೆಚ್ಚುವಂತೆ ಮರ್ತ್ಯಲೋಕದಲ್ಲಿ ನಿಜ ಶರಣರಾಗಿ ಬಾಳೋಣ.

ಅಯ್ಯಾ ನಿಮ್ಮ ಶರಣರ ಬರವಿಂಗೆ ಗುಡಿ ತೋರಣವ ಕಟ್ಟುವೆ.
ಅಯ್ಯಾ ನಿಮ್ಮ ಶರಣರ ಬರವಿಂಗೆ ಮುಡುಹಿನಲ್ಲಿ ಪಟ್ಟವ ಕಟ್ಟುವೆ.
ಅಯ್ಯಾ ನಿಮ್ಮ ಶರಣರೆನ್ನ ಮನೆಗೆ ಬಂದರೆ,
ಅವರ ಶ್ರೀಪಾದವೆನ್ನ ಹೃದಯದಲ್ಲಿ ಬಗೆದಿಟ್ಟುಕೊಂಬೆ ಕಾಣಾ
ಚೆನ್ನ ಮಲ್ಲಿಕಾರ್ಜುನ.

ಆರು ತೆರೆಯು ನೋಡಂಬಿಗ!
ಬಲು ಮೀರಿ ಬರುತಲಿವೆ ನೋಡಂಬಿಗ!

-ಸಚ್ಚಿದಾನಂದ ಚಟನಳ್ಳಿ

ದಾಹವನ್ನು ಹೆಚ್ಚಿಸುವ ಕಾಮದಿಂದೆನ್ನ ಮುಕ್ತ ಮಾಡಯ್ಯ ತಂದೆ
ನನ್ನನೇ ನನಗೆ ಆಹಾರವಾಗಿಸುವ ಕ್ರೋಧದಿಂದೆನ್ನ ಕಾಯ್ಯಯ್ಯಾ ತಂದೆ
ಗಳಿಸಿದಷ್ಟು ಬಡವನಾಗಿಸುವ ಲೋಭದಿಂದೆನ್ನ ಕಾಯ್ಯಯ್ಯಾ ತಂದೆ
ಕಣ್ಣಿದ್ದೂ ಕುರುಡನನ್ನಾಗಿಸುವ ಮೋಹದಿಂದೆನ್ನ ಕಾಯ್ಯಯ್ಯಾ ತಂದೆ
ನನ್ನ ಪತನಕ್ಕೆ ನನ್ನಿಂದಲೇ ಪಥ ಮಾಡಿಸುವ ಮದದಿಂದೆನ್ನ ಪಾರು ಮಾಡಯ್ಯ ತಂದೆ
ನಾನು ಹೆಣವಾಗುವ ಮೊದಲೇ ಕುಣಿ ತೋಡುವ ಮತ್ಸರದಿಂದೆನ್ನ ಕಾಪಾಡಯ್ಯ
ತಂದೆ ಸ್ವತಂತ್ರ ಧೀರ ಶಿವ ಸಿದ್ದೇಶ್ವರ ಪ್ರಭುವೆ.

- ಸಿದ್ಧಯ್ಯ ಪುರಾಣಿಕ.

ಕಾಮ, ಕ್ರೋಧಾದಿಗಳನ್ನು ಅರಿಷಡ್ವರ್ಗಗಳೆಂದು ಕರೆಯುತ್ತಾರೆ. ಈ ಅರಿಷಡ್ವರ್ಗಗಳು ಮನುಷ್ಯನಿಗೆ ಅಪಾರವಾದ ತೊಂದರೆಯನ್ನು ಕೊಡುತ್ತವೆ. ನಮ್ಮ ಪ್ರತಿಯೊಂದು ಸಮಸ್ಯೆಗೂ, ಅರಿಷಡ್ವರ್ಗಗಳಲ್ಲೇ ಒಂದು ಕಾರಣವಾಗಿರುತ್ತದೆ. ಇವುಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳಲು ಕೂಡ ಬರುತ್ತದೆ. ಅದನ್ನೇ ಶರಣರು ನಮಗೆ ಕಲಿಸಿಕೊಡುತ್ತಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಬಯಸಿದ್ದೆಲ್ಲಾ ಬೇಕು ಎನ್ನುವುದೇ ಕಾಮ, ಅದು ಸಿಗದಿದ್ದಾಗ ತಾಳುವ ಮನೋಭಾವನೆಯೇ ಕ್ರೋಧ. ಸಿಗುವಂಥದು ನನಗೇ ಸಿಗಬೇಕು, ಹೆಚ್ಚು ಸಿಗಬೇಕು ಎನ್ನುವುದೇ ಲೋಭ. ಸಿಕ್ಕಿರುವ ವಸ್ತುವಿನ ಮೇಲೆ ಹುಟ್ಟುವ ಅತಿಯಾದ ಪ್ರೀತಿಯೇ ಮೋಹ. ಅಂಥ ವಸ್ತು ಇನ್ನೊಬ್ಬರಿಗೂ ಸಿಕ್ಕರೆ ಅಥವಾ ನಮಗೆ ಬೇಕಾಗಿರುವುದು ನಮಗೆ ಸಿಗದೆ ಇನ್ನೊಬ್ಬರಿಗೆ ಸಿಕ್ಕಾಗ ತಾಳುವ ಮನೋಭಾವನೆಯೇ ಮತ್ಸರ. ಧರ್ಮ ಮಾರ್ಗದಲ್ಲಿ, ಆಧ್ಯಾತ್ಮಿಕ ಪಥದಲ್ಲಿ ನಡೆಯುವ ಸಾಧಕನಿಗೆ ಎಡಹುಗುಳಿ (ಬೀಳಿಸುವ ತಗ್ಗು)ಗಳಾಗಿ ತೊಂದರೆ ಕೊಡುವುದರಲ್ಲಿ ಅರಿಷಡ್ವರ್ಗಗಳದ್ದು ಪ್ರಮುಖವಾದ ಪಾತ್ರ.

ಈ ಜಗತ್ತಿನಲ್ಲಿ ಆಗಿ ಹೋದ ಪ್ರತಿಯೊಬ್ಬ ಮಹಾತ್ಮರೂ ಇವುಗಳಿಗೆ ಹೆದರಿದ್ದಾರೆ. ಇವುಗಳು ತಮ್ಮ ಬಳಿಗೆ ಬರದಂತೆ ಮಾಡಲು ಹರ ಸಾಹಸ ಮಾಡಿದವರಿದ್ದಾರೆ.

ಕಾಮವು ಬಯಕೆಯನ್ನು ಹಿಂಗಿಸುವುದರ ಬದಲಿಗೆ ಉದ್ದೀಪನ ಗೊಳಿಸುತ್ತದೆ. ಪಡೆದಷ್ಟು ಬೇಕೆನಿಸುತ್ತದೆ. ಅದಕ್ಕಾಗಿಯೇ ಕಾಮ ದಾಹವನ್ನು ಹೆಚ್ಚಿಸುವುದು ಎಂದು ಹೇಳಿದ್ದಾರೆ. ಇದಕ್ಕೆ ಪರಿಹಾರ ಏನೆಂದರೆ ಏನನ್ನೂ ಬಯಸದೇ ಇರುವುದು. ನಮಗೆ ಏನೋ ಒಂದು ಬೇಕಾದಾಗ, ನನಗಿದು ಬೇಕು ಎಂದು ಸಂಕಲ್ಪ ಮಾಡಿಕೊಳ್ಳಬೇಕು. ಪ್ರಯತ್ನ ಮಾಡಬೇಕು. ಆದರೆ ಅದು ಸಿಗದೇ ಇರುವಾಗ ನಿರಾಶೆಗೊಳ್ಳಬಾರದು.

ಕ್ರೋಧವು ನಮ್ಮನ್ನೇ ಬಲಿ ತೆಗೆದುಕೊಳ್ಳುವಂಥದ್ದು. ಸಾಮಾನ್ಯವಾಗಿ ಕ್ರೋಧವು ನಾವು ಅಂದುಕೊಂಡ ಹಾಗೆ ಆಗದೆ ಇದ್ದಾಗ ಬರುತ್ತದೆ. ಕ್ರೋಧವನ್ನು ಜಯಿಸಿದರೆ ಎಲ್ಲವನ್ನೂ ಜಯಿಸಿದಂತೆಯೇ. ಅಲೆಗ್ಸಾಂಡರನು ಭಾರತದ ಮೇಲೆ ದಂಡೆತ್ತಿ ಬರುವಾಗ, ಗ್ರೀಕ್ ದೇಶದ

ಜನರು ಭಾರತೀಯ ಸಂತರೊಬ್ಬರನ್ನು ಇಲ್ಲಿಗೆ ಕರೆದುಕೊಂಡು ಬರಬೇಕೆಂದು ಕೇಳಿಕೊಂಡಿದ್ದರು. ಅಂತೆಯೇ ಅಲೆಗ್ಸಾಂಡರ್‌ನೂ ಭಾರತವನ್ನು ಜಯಿಸಿ ಹಿಂದಿರುಗುವಾಗ ತನ್ನ ನಾಡಿನ ಪ್ರಜೆಗಳು ಹೇಳಿದ ಮಾತು ಅವನಿಗೆ ನೆನಪಾಯಿತು. ದಾರಿಯಲ್ಲಿ, ಒಂದು ಮರದ ಕೆಳಗೆ ಯೋಗಿಯೊಬ್ಬರು ಧ್ಯಾನಕ್ಕೆ ಕುಳಿತಿದ್ದರು. ಆಗ ಅಲೆಗ್ಸಾಂಡರ್ ಅವರಿಗೆ ನಮಸ್ಕರಿಸಿ ತಾವು ಗ್ರೀಕ್ ದೇಶಕ್ಕೆ ಬರಬೇಕೆಂದು ಕೇಳಿಕೊಂಡ. ಅಲ್ಲಿ ಅವರಿಗೆ ರಾಜ ಮರ್ಯಾದೆಯಲ್ಲಿ, ವೈಭೋಗದ ಅರಮನೆಯಲ್ಲಿ ಎಲ್ಲಾ ರೀತಿ ಸುಖ ಸೌಲಭ್ಯಗಳನ್ನು ಒದಗಿಸಿಕೊಡುವುದಾಗಿ ಹೇಳಿದನು. ಆಗ ಆ ಯೋಗಿಯು ''ನಾನಿಲ್ಲೇ ತುಂಬಾ ಸುಖವಾಗಿದ್ದೇನೆ. ಅದಕ್ಕಾಗಿ ನಾನು ನಿಮ್ಮ ದೇಶಕ್ಕೆ ಬರುವುದಿಲ್ಲ'' ಎಂದನು. ಅಲೆಗ್ಸಾಂಡರನು ಮತ್ತೆ ವಿನಂತಿಸಿದರೂ ಯೋಗಿಯು ಹೋಗುವುದಕ್ಕೆ ಒಪ್ಪಿಕೊಳ್ಳಲೇ ಇಲ್ಲ. ಆಗ ಅಲೆಗ್ಸಾಂಡರನು ತನ್ನ ವರಸೆಯಿಂದ ಕತ್ತಿಯನ್ನು ಹೊರತೆಗೆದು ''ನಾನು ಯಾರು ಗೊತ್ತೋ? ಇಡೀ ವಿಶ್ವವನ್ನೇ ಗೆದ್ದ ಅಲೆಗ್ಸಾಂಡರ್, ನಿನ್ನನ್ನು ತುಂಡು ತುಂಡಾಗಿ ಕತ್ತರಿಸ ಬಲ್ಲೆ'' ಎಂದ. ಆಗ ಆ ಯೋಗಿಯು ''ನೀನು ನನ್ನ ಗುಲಾಮನ ಗುಲಾಮ'' ಎಂದ. ಅಲೆಗ್ಸಾಂಡರನಿಗೆ ಆಶ್ಚರ್ಯವಾಗಿ, ''ಅದು ಹೇಗೆ?'' ಎಂದು ಕೇಳಿದ. ''ಕೋಪವು ನನ್ನ ಗುಲಾಮನಾಗಿದೆ, ನೀನು ಅದರ ಗುಲಾಮನಾಗಿದ್ದೀಯ, ನೀನು ಜಗತ್ತನ್ನೇ ಗೆದ್ದರೇನಂತೆ, ಎಷ್ಟು ಬೇಗ ಸಹನೆ ಕಳೆದುಕೊಳ್ಳುತ್ತೀಯ, ಅದಕ್ಕಾಗಿ ನೀನು ನನ್ನ ಗುಲಾಮನ ಗುಲಾಮ'' ಎಂದು ಯೋಗಿ ನುಡಿದರು. ಅಲೆಗ್ಸಾಂಡರಿನಿಗೆ ಹೃದಯ ಪರಿವರ್ತನೆಯಾಗಿ ಆ ಯೋಗಿಯನ್ನು ಅಲ್ಲಿಯೇ ಬಿಟ್ಟು ಹೋದ.

ಕೋಪವೆಂಬುದು ತಾನು ಪಾಪದ ನೆಲೆಗಟ್ಟು
ಆಪತ್ತು ಸುಖವು ಸಮವೆಂದು। ಕಾಂಬವಗೆ
ಕೋಪವು ಎಲ್ಲಿಹುದೊ ಸರ್ವಜ್ಞ॥

ಕೋಪವು ಮಾಡಿಕೊಳ್ಳುವುದರಿಂದ, ನಮ್ಮ ದೇಹದಲ್ಲಿರುವ ರಕ್ತ ಸುಡುತ್ತದೆ ಅನೇಕ ಕಾಯಿಲೆಗಳು ಬರುತ್ತವೆ. ರಕ್ತದೊತ್ತಡ ಹೆಚ್ಚಾಗುತ್ತದೆ. ಕೆಲವೊಮ್ಮೆ ಹೃದಯಾಘಾತವಾಗುವ ಸನ್ನಿವೇಶಗಳೂ ಇರುತ್ತವೆ.

ತನಗೆ ಮುನಿಯುವವರಿಗೆ ತಾ ಮುನಿಯಲೇಕಯ್ಯಾ
ತನಗಾದ ಆಗೇನು? ಅವರಿಗಾದ ಚೇಗೆಯೇನು?
ತನುವಿನ ಕೋಪ, ತನ್ನ ಹಿರಿಯತನದ ಕೇಡು!
ಮನದ ಕೋಪ ತನ್ನ ಅರಿವಿನ ಕೇಡು!
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಲಿಂಗದೇವಾ! (ಬ.ವ.ದೀ.-250)

ಕೋಪುವು ಒಂದು ಸಲ ಹೊರಬಂದರೆ ಸಾಕು, ಅದು ನಮಗೆ ಹಾನಿ ಮಾಡಿಯೇ ಇತರರಿಗೆ ಹಾನಿ ಮಾಡುತ್ತದೆ. ಅದು ನಮ್ಮನು ನಮಗೆ ಆಹುತಿಯಾನ್ನಾಗಿ ಮಾಡುತ್ತದೆ. ಕೊಪವು ಬಂದಾಗ ಮನುಷ್ಯನ ಅರಿವು ಮಾಯವಾಗುತ್ತದೆ. ಕೋಪ ಜಯಿಸುವುದು ತುಂಬಾ ಕಷ್ಟ, ಅನೇಕ ಸಲ ನಾವು ಸಣ್ಣ ಸಣ್ಣ ವಿಷಯಗಳಿಗೆ ಕೋಪಿಸಿಕೊಳ್ಳುತ್ತೇವೆ. ಯಾರಿಗೆ ಅಹಂಕಾರ ಹೆಚ್ಚಿರುತ್ತದೆಯೋ ಅಂಥವರಿಗೆ ಕೋಪವೂ ಹೆಚ್ಚಾಗಿರುತ್ತವೆ. ಕೋಪವು ಒಂದು ರೀತಿಯ ವಿಷ, ಅದು ನುಂಗಿದರೂ ಹಾನಿ ಉಗುಳಿದರೂ ಹಾನಿಯೇ. ಆದಕ್ಕೆ ಆ ವಿಷ ನಮ್ಮಲ್ಲಿ ಹುಟ್ಟದಂತೆ ನೋಡಿಕೊಂಡರೆ ಒಳ್ಳೆಯದು.

ಒಡಲೆಂಬ ಹುತ್ತಕ್ಕೆ। ನುಡಿವ ನಾಲಗೆ ಸರ್ಪ
ಕಡುರೋಷವೆಂಬ ವಿಷವೇರೆ। ಸಮತೆ
ಗಾರುಡಿಗನಂತಕ್ಕು ಸರ್ವಜ್ಞ ॥

ರೋಷ ಮತ್ತು ಕೋಪವೆಂಬ ವಿಷವೇರಿದವರಿಗೆ ಚಿತ್ತ ಸಮತೆ, ಶಾಂತಿ ಸಮಾಧಾನಗಳೇ ಗಾರುಡಿಗ ವಿದ್ಯೆಯಿದ್ದ ಹಾಗೆ. ಹಾವನ್ನು ಆಡಿಸುವವನು ವಿಷವನಿಳುಹುವ ಗಾರುಡಿಗ ವಿದ್ಯೆ ಕಲಿತ ಮೇಲೆಯೇ ಹಾವನ್ನಾಡಿಸುತ್ತಾರೆ. ಕೋಪವು ಮನುಷ್ಯನ ಅವಿಭಾಜ್ಯ ಅಂಗ, ಅದಕ್ಕಾಗಿ ಶರಣರಾದವರು ಸಾಧಕರು ಸಮಾಧಾನ ಚಿತ್ತವೆಂಬ ಗಾರುಡಿಗ ವಿದ್ಯೆಯನ್ನು ಮೊದಲು ಕಲಿತು ಕೊಂಡಿರಬೇಕು !

ಲೋಭ ಎಂದರೆ ಅತಿಯಾಸೆ, ಎಷ್ಟೇಗಳಿಸಿದರೂ ಅದರ ದಾಹ ತೀರುವುದೇ ಇಲ್ಲ. ಲೋಭಿಯಾದ ವ್ಯಕ್ತಿ ಅನೇಕ ಸಲ ತನ್ನ ಸುಖವನ್ನೂ ಕಡೆಗೆಣಿಸುತ್ತಾನೆ.

ಉಣ್ಣದೊಡವೆಯ ಗಳಿಸಿ ಮಣ್ಣಿನೊಳು ತಾನಿರಿಸಿ।
ಸಣ್ಣಣಿಸಿ ನೆಲನ ಸಾರಿದವನ। ಬಾಯೊಳಗೆ
ಮಣ್ಣು ಕಾಣಯ್ಯ ಸರ್ವಜ್ಞ।

ದಾನ, ಧರ್ಮ ಏನೊಂದು ಮಾಡದೆ ಬರೀ ಹಣ ಗಳಿಕೆಯಲ್ಲೇ ಕಾಲ ಕಳೆಯುವವನು ಒಂದು ದಿನ ತುಂಬಾ ದುಃಖವನ್ನು ಅನುಭವಿಸಬೇಕಾಗುತ್ತದೆ. ಕಾರಣ ಇಡೀ ಜೀವನವೆಲ್ಲ ಹಣಗಳಿಸುವುದರಲ್ಲೇ ಕಾಲ ಕಳೆದಿರುತ್ತಾನೆ. ಪುಣ್ಯಗಳಿಸಿರುವುದಿಲ್ಲ ಶರಣರ ಸಂಗದಲ್ಲಿ ಬೆರೆತು ಗಣ ಪದವಿ ಹೊಂದಿರುವುದಿಲ್ಲ. ಒಂದು ದಿನ ಹಣ ಬೇರೆಯವರ ಪಾಲಾದಾಗಲೋ ಅಥವಾ ಹಣವೆಲ್ಲವನ್ನೂ ಕಿತ್ತುಕೊಂಡು ಮಕ್ಕಳು ಮಸಿಯಿಂದ ಹೊರ ಹಾಕಿದಾಗಲೋ ತುಂಬಾ ದುಃಖಿಸುತ್ತಾನೆ.

ಭಿಕ್ಷವೆಂದವರಿಗೆ ಭಿಕ್ಷವನು ನೀಡಿದರೆ।
ಅಕ್ಷಯ ಪದವು ತನಗಕ್ಕು। ಇಲ್ಲವನೆ
ಭಿಕ್ಷುಕನಕ್ಕು ಸರ್ವಜ್ಞ॥

ಮಾನವರ ದುರ್ಗುಣವನೇನೆಂದು ಬಣ್ಣಿಪೆನು।
ದಾನಗಯ್ಯಲು ಕನಲುವರು। ದಂಡವನು
ಮೌನದೀಯುವರು ಸರ್ವಜ್ಞ॥

ಉಳ್ಳಲ್ಲಿ ಉಣಲಿಲ್ಲ ಉಳ್ಳಲ್ಲಿ ಉಡಲಿಲ್ಲ।
ಉಳ್ಳಲ್ಲಿ ದಾನ ಕೊಡಲೊಲ್ಲದವನೊಡವೆ।
ಕಳ್ಳಗೆ ನೃಪಗೆ ಸರ್ವಜ್ಞ॥

ದಾಸೋಹ ಮಾಡುವುದರ ಮೂಲಕ, ಬಡವರಿಗೆ ಸಹಾಯ ಮಾಡುವುದರ ಮೂಲಕ ವ್ಯಕ್ತಿಯು ಪುಣ್ಯವನ್ನು ಗಳಿಸಿಕೊಳ್ಳಬೇಕು. ದೇಹಕ್ಕೆ ಜೀವವಿಮೆ ಮಾಡಿಸುತ್ತಾರೆ. ಅದೇ ರೀತಿ ಆತ್ಮಕ್ಕೂ ಜೀವ ವಿಮೆ ಬೇಕು, ಅದುವೇ ದಾಸೋಹ!

ಸಂಸಾರವೆಂಬುದೊಂದು ಗಾಳಿಯ ಸೊಡರು. ಸಿರಿಯೆಂಬುದು ಸಂತೆಯ ಮಂದಿ ಇದ್ದ ಹಾಗೆ. ಯಾವಾಗಲೂ ಸಂತೆಯಲ್ಲಿ ಜನ ಇರುವುದಿಲ್ಲ. ಬರುತ್ತಾರೆ ಹೋಗುತ್ತಾರೆ ಅಂತೆಯೇ ಸಿರಿಯೂ ಕೂಡ.

Money comes and goes,
Morality comes and stays,
Knowledge comes and grows.

ಎನ್ನುವಂತೆ ಜ್ಞಾನಗಳಿಸದೇ, ಪುಣ್ಯಗಳಿಸದೇ ಕೇವಲ ಹಣಗಳಿಸಿದರೆ ಅದು ಒಂದು ದಿನ ಹೊರಟು ಹೋಗುತ್ತದೆ. ಹಣಗಳಿಸುವುದರ ಜೊತೆಗೆ ಪುಣ್ಯ ಹಾಗೂ ಜ್ಞಾನವನ್ನೂ ಗಳಿಸಬೇಕು.

''ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ'' ಎಂದು ಗಾದೆ ಮಾತೊಂದಿದೆ. ವ್ಯಕ್ತಿ ಯಾವುದೇ ವಸ್ತುವಿನೊಂದಿಗೆ ತುಂಬಾ ಆಕರ್ಷಣೆ ಬೆಳೆಸಿಕೊಳ್ಳಬಾರದು. ಅದು ನಮ್ಮೊಂದಿಗೆ ಇಲ್ಲವಾದಾಗ ಅಥವಾ ಅದು ನಮ್ಮದಾಗದೇ ಹೋದಾಗ ಮನಸ್ಸಿಗೆ ಆಘಾತವಾಗುತ್ತವೆ. ನಿರ್ಲಿಪ್ತ ಮನಸ್ಥಿತಿಯಿಂದ ಇದ್ದರೆ ಇಂಥ ಪರಿಸ್ಥಿತಿ ಬರುವುದಿಲ್ಲ. ಪ್ರೀತಿಯೇ ಬೇರೆ, ಮೋಹವೇ ಬೇರೆ. ಪ್ರೀತಿ ತಪ್ಪನ್ನು ತಿದ್ದುತ್ತದೆ, ಮೋಹ ತಪ್ಪನ್ನು ಮನ್ನಿಸುತ್ತದೆ. ಮಕ್ಕಳ ಮೇಲೆ ಪ್ರೀತಿಯಿರುವ, ಕಾಳಜಿಯಿರುವ ತಾಯಿ-ತಂದೆಯರು ಮಕ್ಕಳು ತಪ್ಪು ಮಾಡಿದಾಗ ಅವರನ್ನು ಬೈದು ಹೊಡೆದು ತಿದ್ದುತ್ತಾರೆ. ಮಕ್ಕಳ ಮೇಲೆ ವ್ಯಾಮೋಹ ಇರುವವರು, ಅವರನ್ನು ಬೈಯದೇ ಸುಮ್ಮನಿರುತ್ತಾರೆ. ಈ ರೀತಿ ಮಾಡಬಾರದು ಇದರಿಂದ ಮಕ್ಕಳ ಭವಿಷ್ಯಕ್ಕೆ ಬಹುದೊಡ್ಡ ಹೊಡೆತ ಬೀಳುತ್ತದೆ. ಅವರು ಅಳವಡಿಸಿಕೊಳ್ಳುವ ದುರ್ಗುಣಗಳನ್ನು ಎಳೆಯದರಲ್ಲಿಯೇ ಚಿವುಟಿ ಹಾಕಬೇಕು.

ಮದವು ನಮ್ಮನ್ನು ಪತನದ ಹಾದಿಗೆ ಕೊಂಡೊಯ್ಯುತ್ತದೆ. ಮದ ಎಂದರೆ ಅಹಂಕಾರ, ಎಲ್ಲವೂ ನಾನೆ ಮಾಡಿದೆ ನಾನಿಲ್ಲದೆ ಏನೂ ನಡೆಯಲಾರದು ಎಂದು ತಿಳಿದುಕೊಳ್ಳುವವರು ಬೇಗ ಅಳಿದು ಹೋಗುತ್ತಾರೆ.

ಒಂದು ಪ್ರಸಿದ್ಧವಾದ ಕಥೆ ಹೀಗಿದೆ : ಒಬ್ಬನು ಬಹು ಸುಂದರವಾದ ಮೂರ್ತಿಗಳನ್ನು ಮಾಡುವವನಿದ್ದ. ಅವನ ಸಾವು ಸಮೀಪ ಬರುತ್ತಿದೆ ಎನಿಸಿತು. 'ಬೀಸುವ ದೊಣ್ಣೆ ತಪ್ಪಿದರೆ ನೂರು ವರುಷ' ಎನ್ನುವ ಹಾಗೆ ಒಮ್ಮೆ ಯಮಪಾಶದಿಂದ ತಪ್ಪಿಸಿಕೊಂಡರೆ ಮತ್ತೆ ಸುಮಾರು ವರ್ಷ ಬದುಕಬಹುದು ಎನ್ನುವುದು ನಂಬಿಕೆ. ಅದಕ್ಕವನು ಒಂದು ಯೋಚನೆಯನ್ನು ಮಾಡಿದ. ತನ್ನಂತೆ ಹತ್ತು ಮೂರ್ತಿಗಳನ್ನು ಮಾಡಿ ಅವುಗಳ ಸಾಲಿನಲ್ಲಿ ತಾನೂ ಮೂರ್ತಿಯಂತೆ ಕುಳಿತ. ಯಮರಾಜನಿಗೆ ಪಾಶ ಹಾಕಲಿಕ್ಕೆ ಗೊತ್ತಾಗಬಾರದು ಎಂದು ತಿಳಿದು ಈ ರೀತಿ ಮಾಡಿದ. ಯಮ ಬಂದ ತಕ್ಷಣ, ಅವನಿಗೆ ಯಾರಿಗೆ ಪಾಶ ಹಾಕಬೇಕು ಎಂದು ಗೊತ್ತಾಗಲೇ ಇಲ್ಲ. ಅದಕ್ಕಾಗಿ ಅವನು ''ಇಷ್ಟೊಂದು ಚೆನ್ನಾಗಿ ಮೂರ್ತಿಗಳನ್ನು ಮಾಡಿದವರು ಯಾರಿರಬಹುದು? ಆ ಕಲಾಕಾರನ ಕಲೆಯನ್ನು ಮೆಚ್ಚಿಕೊಳ್ಳಬೇಕು! ಅವನೇನಾದರೂ ನನಗೆ ಸಿಕ್ಕರೆ ನೂರು ವರ್ಷ ಆಯುಷ್ಯ ಹೆಚ್ಚಿಗೆ ಕೊಡುತ್ತೇನೆ'' ಎಂದುಜೋರಾಗಿ ಮಾತನಾಡಲು ಆರಂಭಿಸಿದ. ಆ ಮೂರ್ತಿಗಳ ಮಧ್ಯದಲ್ಲೇ ಕುಳಿತ ಈ ಕಲಾಕಾರನು ''ಈ ಮೂರ್ತಿಗಳನ್ನು ಮಾಡಿದವನು ನಾನೆ'' ಎಂದು ಎದ್ದು ಬಂದ. ಆಗ ಯಮನು ''ನೀನೆ ಬೇಕಾಗಿತ್ತು ಬಾ'' ಎಂದು ಯಮ ಪಾಶವನ್ನು ಹಾಕಿ ಕರೆದುಕೊಂಡು ಹೋದನು. ಇದು ಸುಮ್ಮನೆ ಕಥೆಯಾದರೂ

ವಾಸ್ತವಿಕವಾಗಿಯೂ ಮದವು ನಮ್ಮ ಪತನಕ್ಕೆ ಕಾರಣವಾಗುತ್ತದೆ.

ಮತ್ಸರವು ನಾವು ಹೆಣವಾಗುವ ಮೊದಲೇ ಕುಣಿತೊಡುತ್ತದೆ ಎನ್ನುತ್ತಾರೆ. ದ್ವೇಷ, ಅಸೂಯೆ, ಹೊಟ್ಟೆಕಿಚ್ಚು ಮತ್ಸರಕ್ಕಿರುವ ಇತರ ಹೆಸರುಗಳು. ಇನ್ನೊಬ್ಬರ ಏಳಿಗೆ, ಇನ್ನೊಬ್ಬರ ಪ್ರತಿಭೆ ಕಂಡು ಸಂತೋಷ ಪಡಬೇಕು. ಅದು ಬಿಟ್ಟು ಅವರ ಮೇಲೆ ದ್ವೇಷ ಸಾಧಿಸುವುದು ಒಳ್ಳೆಯದಲ್ಲ. ಹೊಟ್ಟೆ ಕಿಚ್ಚು ಪಡುವುದರಿಂದ ಕರುಳಿನ ಹುಣ್ಣು ರೋಗ ಬರುತ್ತದೆ ಮತ್ತು ಇಂಥವರಿಂದ ಜೀವನದಲ್ಲಿ ಏನನ್ನೂ ಸಾಧಿಸಲಾಗದು. ಕೇವಲ ಇತರರನ್ನು ನೋಡಿ ಮತ್ಸರಿಸುತ್ತಲೇ ಇರುತ್ತಾರೆ. ಯಾವಾಗಲೂ ಒಂದು ಗೆರೆಯನ್ನು ಅಳಿಸಿ ಚಿಕ್ಕದು ಮಾಡಬಾರದು ಅದರ ಮೇಲೆ ಮತ್ತೊಂದು ದೊಡ್ಡ ಗೆರೆಯನ್ನು ಎಳೆಯುವುದರ ಮೂಲಕ ಮೊದಲಿನ ಗೆರೆಯನ್ನು ಚಿಕ್ಕದನ್ನಾಗಿ ಮಾಡಬಹುದು. ಅದಕ್ಕಾಗಿ ಇನ್ನೊಬ್ಬರ ಪ್ರತಿಭೆ ಕಂಡು ಅವರಂತೆ ಪ್ರತಿಭಾವಂತರಾಗಲಿಕ್ಕೆ ಪ್ರಯತ್ನಿಸಬೇಕೆ ಹೊರತು ಅವರ ಮೇಲೆ ದ್ವೇಷಸಾಧಿಸಿ, ಛಾಡಿ ಹೇಳುವುದು ಆರೋಪ ಹೊರಿಸುವುದು ಮಾಡಬಾರದು.

ಶರಣನಾದವರಿಗೆ ಅದರಲ್ಲೂ ಬಸವ ಪಥದಲ್ಲಿ ನಡೆವವರಿಗೆ ಅರಿಷಡ್ವರ್ಗಗಳು ಬೇಡವೇ ಬೇಡ.

ಕಾಮವೇಕೋ, ಲಿಂಗಪ್ರೇಮಿಯೆನಿಸುವಂಗೆ?
ಕ್ರೋಧವೇಕೋ, ಶರಣವೇದ್ಯನೆನಿಸುವಂಗೆ?
ಲೋಭವೇಕೋ, ಭಕ್ತಿಯ ಲಾಭವ ಬಯಸುವಂಗೆ?
ಮೋಹವೇಕೋ, ಪ್ರಸಾದ ವೇದ್ಯನೆನಿಸುವಂಗೆ?
ಮದ, ಮತ್ಸರವುಳ್ಳವಂಗೆ ಹೃದಯ ಶುದ್ಧಿಯೆಲ್ಲಿಯದೋ?
ಹದುಳಿಗರಾದಲಿಪ್ಪನಮ್ಮ ಲಿಂಗದೇವಾ. (ಬ.ವ.ದೀ.-120)

ಹದುಳತನ (ವಿನಯ ಭಾವ) ಅಳವಡಿಸಿಕೊಂಡಾಗ ಪರಮಾತ್ಮನು ನಮ್ಮ ಅಂತರಂಗದಲ್ಲಿ ವಾಸ ಮಾಡುತ್ತ ಅನುಗ್ರಹಿಸುತ್ತಾನೆ.

ಸಾಧಕನಾದವನು ತನ್ನ ಆತ್ಮನೆಂಬ ಓಲೆಯನ್ನು ಪರಮಾತ್ಮನಲ್ಲಿಗೆ ಕೊಂಡೊಯ್ಯುವಾಗ, ಕಾಮ, ಕ್ರೋಧಾದಿಗಳನ್ನು ಇಲ್ಲಿಯೇ ನಿಲ್ಲಿಸಿ, ಅವುಗಳನ್ನು ಅಳಿಸಿಕೊಂಡು ಹೋಗಬೇಕಾಗುತ್ತವೆ.

ಹಸಿವೆಯೇ ನೀನು ನಿಲ್ಲು ನಿಲ್ಲು.
ತೃಷೆಯೇ ನೀನು ನಿಲ್ಲು ನಿಲ್ಲು.
ನಿದ್ರೆಯೇ ನೀನು ನಿಲ್ಲು ನಿಲ್ಲು.
ಕಾಮವೇ ನೀನು ನಿಲ್ಲು ನಿಲ್ಲು.
ಕ್ರೋಧವೇ ನೀನು ನಿಲ್ಲು ನಿಲ್ಲು.
ಲೋಭವೇ ನೀನು ನಿಲ್ಲು ನಿಲ್ಲು.
ಮೋಹವೇ ನೀನು ನಿಲ್ಲು ನಿಲ್ಲು.
ಮದವೇ ನೀನು ನಿಲ್ಲು ನಿಲ್ಲು.

ಮತ್ಸರವೇ ನೀನು ನಿಲ್ಲು ನಿಲ್ಲು.
ಸಚರಾಚರವೇ ನೀನು ನಿಲ್ಲು ನಿಲ್ಲು.
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯ ದೇವರಿಗೆ ಅವಸರದ
ಓಲೆಯನೊಯ್ಯುತಲಿದ್ದೇನೆ ಶರಣಾರ್ಥಿ.

ಎಂದು ಅಕ್ಕಮಹಾದೇವಿಯವರು ಕಾಮ, ಕ್ರೋಧಿಗಳಿಗೆ ಜೈ ಜೈ (Good Bye) ಹೇಳಿದ ರೀತಿ ಮನಮುಟ್ಟುವಂತಿದೆ.

ಕಾಮವೇ ಮಿತಿಯಲ್ಲಿ ಹಿತ, ಅತಿಯಲ್ಲಿ ಅಹಿತ ನೀನು
ಕ್ರೋಧವೇ ಉಗುಳಿದರೆ ವಿಷ, ನುಂಗಿದರೆ ರಸ ನೀನು
ಲೋಭವೇ ಒಳತಿಗುಂಟು ಲಾಭ, ಕೆಡುಕಿಗುಂಟು ಹಾನಿ ನೀನು
ಮೋಹವೇ ಸಮಷ್ಟಿಗಾಗಿರೆ ವರ, ವ್ಯಷ್ಟಿಗಾಗಿರೆ ಶಾಪ
ಮದವೇ ಅಶುಭವೆದುರಿಸೆ ಶುಭ, ಶುಭವೆದುರಿಸೆ ಅಶುಭ ನೀನು
ಮತ್ಸರವೇ ಅಶಿವಕ್ಕಾಗಿ ಇರೆ ಲೇಸು, ಶಿವಕ್ಕಾಗಿರೆ ಹೇಸಿ ನೀನು
ನೀವೆಲ್ಲರೂ ಅರಿಗಳೂ ಅಹುದು ಸಹಕಾರಿಗಳೂ ಅಹುದು
ಅರಿಗಳಾಗಿಸದೆ ಸಹಕಾರಿಗಳನ್ನಾಗಿಸಿಕೊಳ್ಳುವ
ಬುದ್ಧಿಯನ್ನೇ ಕರುಣಿಸು ಸ್ವತಂತ್ರ ಧೀರ ಸಿದ್ದೇಶ್ವರ.

ಕಾಮ, ಕ್ರೋಧಾದಿಗಳು ನಮಗೆ ಶತ್ರುಗಳು ಆಗುತ್ತವೆ, ಮಿತ್ರರೂ ಆಗುತ್ತವೆ. ಅದನ್ನೇ ಸಿದ್ದಯ್ಯ ಪುರಾಣಿಕರು ಮೇಲಿನ ವಚನದಲ್ಲಿ ತಿಳಿಸಿದ್ದಾರೆ. ಅರಿಷಡ್ವರ್ಗಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳುವ ವಿಧಾನವನ್ನು ವಚನ ಸಾಹಿತ್ಯದಲ್ಲಿ ಉದಾತ್ತೀಕರಣ ಎಂದು ಕರೆಯುತ್ತಾರೆ. ಇಂದ್ರಿಯ ಮುಖವಾಗಿರುವ ಕಾಮ, ಕ್ರೋಧಾದಿಗಳನ್ನು ದೇವ ಮುಖವಾಗಿ ಮಾಡಿಕೊಳ್ಳಬೇಕು. ಇದನ್ನು ಚೆನ್ನ ಬಸವಣ್ಣನವರು ತುಂಬಾ ವಿಶೇಷವಾಗಿ ಹೇಳುತ್ತಿದ್ದಾರೆ.

ಶಿವಭಕ್ತಿಯುಳ್ಳವಂಗೆ;
ಕಾಮಬೇಡ, ಕ್ರೋಧಬೇಡ, ಲೋಭ ಬೇಡ,
ಮೋಹ ಬೇಡ, ಮದ ಬೇಡ, ಮತ್ಸರ ಬೇಡ,
ಶಿವಭಕ್ತಿಯುಳ್ಳವಂಗೆ;
ಕಾಮ ಬೇಕು, ಕ್ರೋಧ ಬೇಕು, ಲೋಭ ಬೇಕು
ಮೋಹ ಬೇಕು, ಮದ ಬೇಕು, ಮತ್ಸರ ಬೇಕು
ಬೇಕೆಂಬುದಕ್ಕಾವ ಗುಣ?
ಕಾಮ ಬೇಕು ಲಿಂಗದಲ್ಲಿ, ಕ್ರೋಧ ಬೇಕು ಕರಣಂಗಳಲ್ಲಿ,
ಲೋಭ ಬೇಕು ಪಾದೋದಕ ಪ್ರಸಾದದಲ್ಲಿ,
ಮೋಹ ಬೇಕು ಗುರು-ಲಿಂಗ-ಜಂಗಮದಲ್ಲಿ,
ಮದ ಬೇಕು ಶಿವಚಾರದಿಂದ ಘನವಿಲ್ಲವೆಂದು,
ಮತ್ಸರ ಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ
ಇಂತೀ ಷಡುಣವಿರಬೇಕು.

ಬೇಡವೆಂಬುವುದಕ್ಕಾವ ಗುಣ?
ಕಾಮ ಬೇಡ ಪರಸ್ತ್ರೀಯರಲ್ಲಿ, ಕ್ರೋಧ ಬೇಡ ಗುರುವಿನಲ್ಲಿ
ಲೋಭ ಬೇಡ ತನು ಮನ ಧನದಲ್ಲಿ, ಮೋಹ ಬೇಡ ಸಂಸಾರದಲ್ಲಿ,
ಮದ ಬೇಡ ಶಿವ ಭಕ್ತರಲ್ಲಿ, ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ
ಇಂತೀ ಷಡ್ಗುಣವನರಿದು ಮೆರೆಯಬಲ್ಲಡೆ
ಆತನೇ ಸಹಜ ಸದ್ಭಕ್ತ, ಕಾಣಾ ಕೂಡಲಚೆನ್ನಸಂಗಮದೇವಾ.

ತುಂಬಾ ಸರಳ ಭಾಷೆಯಲ್ಲಿದೆ ಈ ವಚನ ಇದಕ್ಕೆ ಮತ್ತೆ ಅರ್ಥ ಬರೆಯುವ ಅವಶ್ಯಕತೆ ಇಲ್ಲ ಎನಿಸುತ್ತಿದೆ. ಈ ರೀತಿಯಾಗಿ ನಾವು ನಮ್ಮ ಅರಿಷಡ್ವರ್ಗಗಳು ಹರಿಯುವ ದಾರಿಯನ್ನು ಬದಲಾಯಿಸಿಕೊಂಡರೆ, ಅವುಗಳು ನಮಗೆ ಮಿತ್ರರಾಗುತ್ತವೆ. ಸಾಧನೆಯ ಹಾದಿಯಲ್ಲಿ ಎಡಹುಗುಳಿಗಾಗಿ ಕಾರ್ಯ ಮಾಡದೆ ಉತ್ಸಾಹದ ಚಿಲುಮೆಗಳಾಗುತ್ತವೆ. ಈ ರೀತಿಯಾಗಿ ಅರಿಷಡ್ವರ್ಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳುವ ಶಕ್ತಿ ಸಾಮರ್ಥ್ಯ ಗುರುಬಸವಣ್ಣನವರು ನೀಡಿ, ಮೀರಿ ಬರುತ್ತಲಿರುವ ಈ ಆರು ತೆರೆಗಳಲ್ಲಿ, ಪರಮಾತ್ಮನೆಂಬ ಅಂಬಿಗ ನಮ್ಮ ಜೀವನದ ದೋಣಿಯನ್ನು ಮುಳುಗಿಸದೆ, ಮುಕ್ತಿಯೆಂಬ ದಡಕ್ಕೆ ನಮ್ಮನ್ನು ಸೇರಿಸಲಿ ಎಂದು ಪ್ರಾರ್ಥಿಸುತ್ತಾ ನನ್ನ ನುಡಿಗಳಿಗೆ ಮಂಗಳ ಹಾಡುತ್ತೇನೆ.

22ನೇ ಶರಣಮೇಳದಲ್ಲಿ '**ವಚನ ದುಂದುಭಿ**'
ಧಾರ್ಮಿಕ ರಸಪ್ರಶ್ನೆ ಕಾರ್ಯಕ್ರಮ.

ವಚನ ದುಂದುಭಿ ಧಾರ್ಮಿಕ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗಿಗಳಾಗುವವರು, ಒಂದೊಂದು ರಾ.ಬ.ದಳದಿಂದ 5 ಜನರ ತಂಡವನ್ನು ಮಾಡಿಕೊಂಡು ಭಾಗವಹಿಸಬೇಕು. ಪ್ರಶ್ನೋತ್ತರಗಳಿಗಾಗಿ ಸುಯಿಧಾನ ಸುಗ್ರಂಥ ಮಾಲೆಯ **ವಚನ ದುಂದುಭಿ** ಎನ್ನುವ ಪುಸ್ತಕವನ್ನು ನೋಡಬಹುದು ಅದೇ ಪುಸ್ತಕದಿಂದ ಹಾಗು ಕಲ್ಯಾಣ ಕಿರಣದಲ್ಲಿ ಈವರೆಗೆ ಪ್ರಕಟವಾದ ಪ್ರಶ್ನೆಗಳಿಂದಲೇ ಈ ಸ್ಪರ್ಧೆಯಲ್ಲಿ ಪ್ರಶ್ನೆಗಳನ್ನು ಕೇಳಲಾಗುವುದು. ಪುಸ್ತಕವು ಎಲ್ಲಾ ಬಸವ ಮಂಟಪಗಳಲ್ಲಿ ದೊರೆಯುವುದಲ್ಲದೆ, 50 ರೂಗಳ ಮನಿಯಾರ್ಡರ್ ಅನ್ನು ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಕಳುಹಿಸಿದರೂ ಪುಸ್ತಕವನ್ನು ಕಳುಹಿಸಿಕೊಡಲಾಗುವುದು. ಪ್ರಥಮ ಬಹುಮಾನ ವಿಜೇತರಿಗೆ **ವಚನ ದುಂದುಭಿ** ಸಂಚಾರಿ ಕಪ್, ಫಲಕ ಹಾಗು ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು. ದ್ವಿತೀಯ ಹಾಗು ತೃತೀಯ ಬಹುಮಾನ ಪಡೆದವರಿಗೆ ಫಲಕ ಹಾಗು ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು. ಪ್ರಥಮ ಬಹುಮಾನ 1500/-, ದ್ವಿತೀಯ ಬಹುಮಾನ 1000/- ಹಾಗು ತೃತೀಯ ಬಹುಮಾನ 500 ರೂ ಗಳನ್ನೊಳಗೊಂಡಿರುತದೆ. ಅದಕ್ಕಾಗಿ ಈ ಸಲ ಹೆಚ್ಚಿನ ತಂಡಗಳು ಸ್ಪರ್ಧೆಯಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಬೆಂಗಳೂರು ರಾ.ಬ.ದಳ ದವರಿಂದ ನಡೆಸಿಕೊಡಲಾಗುವ ಈ ಕಾರ್ಯಕ್ರಮವು 12.01.2008ರಂದು ಮಧ್ಯಾಹ್ನ 3-30 ರಿಂದ 6-00 ಗಂಟೆಯವರೆಗೆ ನಡೆಯುತ್ತದೆ.

ಕಲ್ಯಾಣ ಕಿರಣ ಲಿಖಿತ ಪರೀಕ್ಷೆ

ದಿನಾಂಕ 13.01.2008 ರಂದು ಕಲ್ಯಾಣ ಕಿರಣ ಲಿಖಿತ ಪರೀಕ್ಷೆ ನಡೆಸಲಾಗುವುದು. ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕ ಪಡೆದ 8ರಿಂದ 10ರವರೆಗಿನ ಪರಿಕ್ಷಾರ್ಥಿಗಳಿಗೆ ಬಹುಮಾನಗಳನ್ನು ನೀಡಲಾಗುವುದು. ಪರೀಕ್ಷೆಯು ಬಹು ಆಯ್ಕೆ ಮತ್ತು ಒಂದೇ ಶಬ್ದದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳನ್ನೊಳಗೊಂಡಿರುತ್ತದೆ.

ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬುವರು

-ಸಚ್ಚಿದಾನಂದ ಚಟನಳ್ಳಿ

ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬುವರು;
ಕಂಗಳಿಚ್ಛೆಗೆ ಪರವಧುವ ನೆರೆವರು;
ಲಿಂಗಲಾಂಛನ ಧಾರಿಯಾದಲ್ಲಿ ಫಲವೇನು
ಲಿಂಗ ಪಥವ ತಪ್ಪಿ ನಡೆವವರು?
ಜಂಗಮ ಮುಖದಿಂದ ನಿಂದೆ ಬಂದಡೆ
ಕೊಂಡ ಮಾರಿಂಗೆ ಹೋಹುದು ತಪ್ಪದು ಲಿಂಗದೇವಾ!

ಸಸ್ಯಾಹಾರಿ ಪದ್ಧತಿ ಅತ್ಯಂತ ಶ್ರೇಷ್ಠವಾದುದು. ಪಾಶ್ಚಿಮಾತ್ಯ ರಾಷ್ಟ್ರಗಳವರು ಇದನ್ನರಿತು ಈಗೀಗ ಹೆಚ್ಚು ಜನ ಸಸ್ಯಾಹಾರಿಗಳಾಗುತ್ತಿದ್ದಾರೆ. ಭಾರತ ದೇಶವು ಮೂಲಭೂತವಾಗಿ, ಧಾರ್ಮಿಕ ಆಧ್ಯಾತ್ಮಿಕ ಪರಂಪರೆಯುಳ್ಳ ದೇಶ. ಈ ದೇಶದಲ್ಲಿ ಹುಟ್ಟಿದಷ್ಟು ಅಹಿಂಸಾವಾದಿ ಪ್ರವಾದಿಗಳು ಬೇರೆ ಯಾವ ದೇಶದಲ್ಲೂ ಹುಟ್ಟಿಲ್ಲ. ಮಹಾವೀರ, ಬುದ್ಧ, ಗುರು ಬಸವಣ್ಣನವರು ಅಹಿಂಸೆಯನ್ನು ಪ್ರತಿಪಾದಿಸಿದವರು. 'ಅಂಹಿಸೊ ಪರಮೋ ಧರ್ಮ' 'ದಯವೇ ಧರ್ಮದ ಮೂಲ' 'ಸಕಲ ಜೀವಾತ್ಮರಿಗೆ ಲೇಸ ಬಯಸುವವನೇ ಕುಲಜನು' ಎಂದು ದಿನನಿತ್ಯವೂ ಕೇಳುವವರು ನಾವು. ಇಂಥ ಸಂದರ್ಭದಲ್ಲಿ ದಿನನಿತ್ಯವೂ ಸಸ್ಯಾಹಾರಿಗಳ ಸಂಖ್ಯೆ ಹೆಚ್ಚಾಗಬೇಕಾಗಿತ್ತು ಆದರೆ ವಿಪರ್ಯಾಸವೇನೆಂದರೆ ಸಸ್ಯಾಹಾರಿಗಳ ಸಂಖ್ಯೆ ದಿನ ದಿನವೂ ಕಡಿಮೆಯಾಗುತ್ತಿದೆ. ಅದರಲ್ಲೂ ಅನೇಕರು ಲಿಂಗಾಯತ ತಾಯಿ ತಂದೆಯರಿಗೆ ಹುಟ್ಟಿದವರೂ ಮಾಂಸಹಾರಿಯಾಗುತ್ತಿರುವುದು ಅತ್ಯಂತ ಕಳವಳಕಾರಿಯಾದ ವಿಷಯವಾಗಿದೆ.

ಕೊಲ್ಲುವಂಥದು ಅದು ಧರ್ಮವೇ ಅಲ್ಲ. ಸರ್ವಜ್ಞ ಕವಿಯ ವಾಣಿ ನೋಡಿ

ಕೊಲುವ ಧರ್ಮವನೊಯ್ದು ಒಲೆಯೊಳಗಿಕ್ಕು
ಕೊಲಲಾಗದೆಂಬ ಜೈನನಾ ಮತವೆನ್ನ
ತಲೆಯ ಮೇಲಿಕ್ಕೆಂದ ಸರ್ವಜ್ಞ॥

ಗುರು ಬಸವಣ್ಣನವರು ಅನೇಕ ವಚನಗಳಲ್ಲಿ ಪ್ರಾಣಿಗಳನ್ನು ಕೊಂದು ತಿನ್ನಬಾರದು ಎಂದು ಹೇಳಿದ್ದಾರೆ. 'ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬುವರು;' ಕೇವಲ ಒಡಲ ಕಳವಳಕ್ಕಾಗಿ ಮಾಂಸಹಾರ ಮಾಡುತ್ತಾರೆ. ಅದರಲ್ಲೂ ಲಿಂಗ ಲಾಂಛನ ಧಾರಿಯಾಗಿ ಮಾಂಸಹಾರ ಮಾಡಿದರೆ ಕೊಂಡಮಾರಿಂಗೆ (ತಾನಾಗಿಯೇ ಮೈಮೇಲೆ ಎಳೆದುಕೊಳ್ಳುವ ವಿಪತ್ತು) ಹೋಗ ಬೇಕಾಗುತ್ತದೆ ಎನ್ನುತ್ತಾರೆ. ಈ ವಿಚಾರವನ್ನು ನೋಡಿದಾಗ ಗುರು ಬಸವಣ್ಣನವರು ಎಷ್ಟೊಂದು ವೈಜ್ಞಾನಿಕವಾಗಿ ವಿಚಾರಗಳನ್ನು ಪ್ರತಿಪಾದಿಸಿದ್ದಾರೆ ಎನಿಸುತ್ತದೆ. ಏಕೆಂದರೆ ಮಾಂಸಹಾರ ಸೇವನೆ ಮಾಡುವುದರಿಂದ ಅನೇಕ ಕಾಯಿಲೆಗಳು, ವಿಪತ್ತುಗಳು ಬರುತ್ತವೆ.ಎನ್ನುವುದು ವೈದ್ಯಲೋಕದ ಅಭಿಪಾಯ.

ಮಾನವನು ನೈಸರ್ಗಿಕವಾಗಿ ಸಸ್ಯಾಹಾರಿಯಾಗಿದ್ದಾನೆ. ಇದಕ್ಕೆ ಹಲವಾರು ನಿದರ್ಶನಗಳನ್ನು ಕೊಡಬಹುದು. ಸಾಮಾನ್ಯವಾಗಿ ಮಾಂಸಹಾರಿ ಪ್ರಾಣಿಗಳಿಗೆ ಗಟ್ಟಿಯಾದ ಚೂಪಾದ ಉಗುರುಗಳು ಮತ್ತು ಕೋರೆಹಲ್ಲುಗಳಿರುತ್ತವೆ. ಸಸ್ಯಾಹಾರಿ ಪ್ರಾಣಿಗಳಿಗೆ ಇಂಥ ಹಲ್ಲುಗಳು ಇರುವುದಿಲ್ಲ. ಮಾನವನಿಗೆ ಹಾಗೂ ಇತರ ಸಸ್ಯಾಹಾರಿ ಪ್ರಾಣಿಗಳಿಗೆ ದವಡೆಯಲ್ಲಿ ಇರುವಂಥ ಹಲ್ಲುಗಳು ಹುಲಿ, ಚಿರತೆ, ನಾಯಿ, ಬೆಕ್ಕುಗಳಿಗಿರುವುದಿಲ್ಲ. ಮಾಂಸಹಾರಿ ಪ್ರಾಣಿಗಳಿಗೆ ಒಂದೇ ಕರುಳು ಇದ್ದು ಅದು ಉದ್ದದಲ್ಲಿ ಚಿಕ್ಕದಾಗಿರುತ್ತದೆ. ಸಸ್ಯಾಹಾರಿ ಪ್ರಾಣಿಗಳಿಗೆ

ಮಾನವನಿಗಿರುವಂತೆ ಸಣ್ಣ ಕರುಳು ಮತ್ತು ದೊಡ್ಡ ಕರುಳು ಎಂದು ಎರಡು ಕರುಳಿರುತ್ತವೆ ಅಲ್ಲದೆ, ಈ ಕರಳುಗಳು ತುಂಬಾ ಉದ್ದವಾಗಿರುತ್ತವೆ. ಮಾಂಸಹಾರಿ ಪ್ರಾಣಿಗಳು ಅಲ್ಪಾಯುಷಿಗಳಾಗಿರುತ್ತವೆ, ಸಸ್ಯಾಹಾರಿ ಪ್ರಾಣಿಗಳು ಮಾಂಸಹಾರಿ ಪ್ರಾಣಿಗಳಿಗಿಂತ ಹೆಚ್ಚು ಕಾಲ ಬದುಕುತ್ತವೆ.

ಮನುಷ್ಯನು ವಿಕಾಸದ ಹಂತದಲ್ಲಿರುವಾಗ ಮೊದಲು ಬೇಟೆಯಾಡಿ ಪ್ರಾಣಿಗಳನ್ನು ತಿನ್ನುತ್ತಿದ್ದ. ಅವನ ಇಡೀ ದಿನ ಆಹಾರ ಹುಡುಕುವುದರಲ್ಲಿಯೇ ಕಳೆಯುತ್ತಿತ್ತು. ಸಸ್ಯಾಹಾರ ಪದ್ಧತಿ ಗೊತ್ತಾಗಿ ದವಸ ಧಾನ್ಯಗಳನ್ನು ಬೆಳೆಯಲು ಕಲಿತ ಮೇಲೆಯೆ ಅವನ ಬೌದ್ಧಿಕ ವಿಕಾಸವಾಗಿರುವುದನ್ನು ಕಾಣುತ್ತೇವೆ. ಹೀಗಾಗಿ ಸಸ್ಯಾಹಾರವು ಮನುಷ್ಯನ ಬುದ್ಧಿಯನ್ನು ಚುರುಕುಗೊಳಿಸುತ್ತದೆ. ಮಾಂಸಹಾರ ಸೇವನೆ ಮಾಡುವವರು ಪರೋಕ್ಷವಾಗಿಯಾಗಲೀ ಅಪರೋಕ್ಷವಾಗಿಯಾಗಲಿ ಪ್ರಾಣಿಗಳನ್ನು ಕೊಲ್ಲ ಬೇಕಾಗುತ್ತದೆ. ''ಜೀವ ನೀಡುವ ಶಕ್ತಿ ನಿನಗಿಲ್ಲದಿರುವಾಗ ಕೊಲ್ಲುವ ಹಕ್ಕು ನಿನಗಿಲ್ಲ'' ಎನ್ನುತ್ತಾರೆ ಮಹಾತ್ಮ ಬುದ್ಧ. ಈ ಭೂಮಿಯ ಮೇಲೆ ಹುಟ್ಟಿರುವ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಅದರ ಹಕ್ಕನ್ನು ಕಿತ್ತುಕೊಳ್ಳುವ ಅಧಿಕಾರ ಯಾರಿಗೂ ಇಲ್ಲ. ಅಲ್ಲದೇ ಸಕಲ ಜೀವಿಗಳಲ್ಲಿಯೂ ದೇವರ ಅಂಶವಿರುವುದರಿಂದ ಪ್ರಾಣಿಗಳನ್ನು ಕೊಲೆ ಮಾಡುವುದರಿಂದ ಪಾಪಕರ್ಮಕ್ಕೆ ಹೋಗುತ್ತಾರೆ.

ಗುರು ಬಸವಣ್ಣನವರು ಶುದ್ಧ ಸಸ್ಯಾಹಾರಿಯಾದ ಲಿಂಗಾಯತ ಧರ್ಮವನ್ನು ಕೊಟ್ಟರು. ಒಂದು ಧರ್ಮ ಎನಿಸಿಕೊಳ್ಳಬೇಕಾದರೆ ಅದಕ್ಕೆ ದಯೆಯು ಮೂಲ ತಳಹದಿಯಾಗಬೇಕು ಎನ್ನುತ್ತಾರೆ.

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ
ಲಿಂಗದೇವಯ್ಯ ನಂತಲ್ಲದೊಲ್ಲನಯ್ಯಾ

ದಯವಿಲ್ಲದುದು ಧರ್ಮವೇ ಅಲ್ಲ, ಧರ್ಮದ ಹೆಸರಿನಲ್ಲಿ ಪ್ರಾಣಿ ಬಲಿಕೊಡುವುದನ್ನು ಶರಣರು ಖಂಡಿಸುತ್ತಾರೆ.

ಯಾವುದೇ ಜೀವಿಯ ಪ್ರಾಣ ತೆಗೆಯ ಬಾರದು ಎಂದು ಹೇಳಿದರೆ ಅನೇಕರು ಸಸ್ಯಗಳಿಗೂ ಜೀವವಿದೆ. ಸಸ್ಯಾಹಾರವನ್ನು ಮಾಡಬಾರದು ಎಂದು ವಾದ ಮಾಡುತ್ತಾರೆ. ಸಸ್ಯಗಳಲ್ಲಿ ಜೀವವಿದೆ ಆದರೆ ಆತ್ಮ ಇಲ್ಲ. ಸಸ್ಯಗಳಿಗೆ ಸುಖ-ದುಃಖ, ನೋವು-ನಲಿವುಗಳಿರುವುದಿಲ್ಲ ಅದಕ್ಕಾಗಿ ಸಸ್ಯಹಾರವು ಹಿಂಸೆಯಲ್ಲ. ಸಸ್ಯಗಳಲ್ಲಿ ಕ್ರಿಯೆಗೆ ಪ್ರತಿಕ್ರಿಯೆಯಿಲ್ಲ. ಆದರೆ ಪ್ರಾಣಿಗಳಲ್ಲಿ ಕ್ರಿಯೆಗೆ ಪ್ರತಿಕ್ರಿಯೆಯಿದೆ ಅವು ತಮ್ಮ ಸುಖ-ದುಃಖವನ್ನು ಪ್ರಕಟಿಸಬಲ್ಲವುಗಳಾಗಿವೆ. ಎಲ್ಲಿ ಆತ್ಮ ಇರುತ್ತದೆಯೋ ಅಂಥವನ್ನು ಕೊಂದಾಗ ಮಾತ್ರ ಅದು ಹಿಂಸೆಯಾಗುತ್ತದೆ. ಕೆಲವರು 'ಮುಟ್ಟಿದರೆ ಮುನಿ' ಗಿಡವು ಕ್ರಿಯೆಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತದೆ ಎಂದು ವಾದ ಮಾಡುತ್ತಾರೆ. ಮುಟ್ಟಿದರೆ ಮುನಿ ಗಿಡವು ಮುಟ್ಟಿದಾಗ ತನ್ನ ಎಲೆಗಳನ್ನು ಮುಚ್ಚಿಕೊಂಡು ಕ್ರಿಯೆಗೆ ಪ್ರತಿಕ್ರಿಯೆ ವ್ಯಕ್ತ ಪಡಿಸಿದರೂ ಆ ಪ್ರತಿಕ್ರಿಯೆ ವೈಚಾರಿಕವಾಗಿ ಮತ್ತು ವೈಜ್ಞಾನಿಕವಾಗಿಲ್ಲ. ಕಸಕಡ್ಡಿ ಏನೇ ಅದರ ಮೇಲೆ ಬಿದ್ದರೂ ಅದು ಮುಚ್ಚಿಕೊಳ್ಳುತ್ತದೆ. ಹೀಗಾಗಿ ಆತ್ಮನ ವಿಕಾಸ, ಅರಿವು

ಎನ್ನುವಂಥದ್ದು ಪ್ರಾಣಿಗಳಲ್ಲಿ ವಿಕಾಸಗೊಂಡಿದೆಯೇ ಹೊರತು ಸಸ್ಯಗಳಲ್ಲಿ ಇಲ್ಲ. ಒಂದು ಬೆಳೆಯುತ್ತಿರುವ ಸಸ್ಯವನ್ನು ಚಿವುಟಿ ಹಾಕಿದರೂ ಅದು ಮತ್ತೆ ಬೆಳೆಯುತ್ತದೆ. ಆದರೆ ಯಾವುದೇ ಪ್ರಾಣಿಯ ಒಂದು ಕಾಲನ್ನು ಕತ್ತರಿಸಿದರೂ ಅದು ಮತ್ತೆ ಬೆಳೆಯುತ್ತದೆಯೇ ? ಇಲ್ಲ. ಮತ್ತೆ ಕೆಲವರು ಹಾಲು ಮಾಂಸದಿಂದಲೇ ಬರುತ್ತದೆ ಅದು ಕೂಡ ಮಾಂಸಹಾರವೇ ಎಂದು ವಾದ ಮಾಡುತ್ತಾರೆ. ಹಾಲು ಮಾಂಸಹಾರವಲ್ಲ ಅದು ಶುದ್ಧ ಸಸ್ಯಾಹಾರ. ಹಾಲನ್ನು ಪ್ರಾಣಿ ಹಿಂಸೆ ಮಾಡಿ ತೆಗೆಯುವುದಿಲ್ಲ ಹಸುವಿನ ಅಥವಾ ಎಮ್ಮೆಯ ಕರುವಿಗೆ ಸಾಕಷ್ಟು ಹಾಲನ್ನು ಬಿಟ್ಟು ಬಿಟ್ಟೇ ಹಾಲನ್ನು ಕರೆಯುತ್ತಾರೆ. ಅಲ್ಲದೇ ಹಾಲು ಹಿಂಡಿಕೊಳ್ಳದೇ ಹೋದರೆ ಕರುವನ್ನು ಹೆತ್ತ ಪ್ರಾಣಿಗೆ ತೊಂದರೆಯಾಗುತ್ತದೆ.

ಮೊಟ್ಟೆಯೂ ಕೂಡ ಮಾಂಸಹಾರವೇ. ಈಗೀಗ ಹೈಬ್ರಿಡ್ ಕೋಳಿಗಳಿಂದ ಮೊಟ್ಟೆ ಉತ್ಪಾದನೆ ಮಾಡುತ್ತಿದ್ದಾರೆ. ಅಂಥ ಮೊಟ್ಟೆಗಳಿಂದ ಮರಿ ಹುಟ್ಟಲಾರವು ಅದಕ್ಕೆ ಮೊಟ್ಟೆಯು ಸಸ್ಯಾಹಾರ ಎಂದು ಕೆಲವರ ವಾದ. ಮೊಟ್ಟೆಯಲ್ಲಿ ಮಾಂಸದ ಅಂಶವಿರುತ್ತದೆ. ಕೋಳಿಗೆ ಚುಚ್ಚು ಮದ್ದು ಕೊಟ್ಟು, ಅಂಥ ಮೊಟ್ಟೆಯಿಂದ ಪುನರುತ್ಪತ್ತಿ ಆಗದಂತೆ ಮಾಡಿರುವುದರಿಂದ ಅದರಿಂದ ಮರಿಗಳು ಹುಟ್ಟಲಾರವು. ಆದರೆ ಮೊಟ್ಟೆ ಮೂಲಭೂತವಾಗಿ ಮಾಂಸಹಾರದಲ್ಲಿಯೇ ಬರುತ್ತದೆ. ಕೆಲವರು ಪ್ರಾಣಿಗಳನ್ನು ಅಮಾನುಷವಾಗಿ ಕೊಲ್ಲುವುದನ್ನು ನೋಡಿದಾಗ ಅವರಿಗೆ ಹೃದಯವೇ ಇಲ್ಲವೇನೋ ಎನಿಸುತ್ತದೆ.

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ
ಹಲವು ಪ್ರಾಣಿಯ ಕೊಂದು, ನಲಿನಲಿದಾಡುವ
ತನ್ನ ಮನೆಯಲೊಂದು ಶಿಶು ಸತ್ತಡೆ
ಅದಕ್ಕೆ ಮರುಗುವಂತೆ ಅವಕ್ಕೇಕೆ ಮರುಗನು?
ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ
ಇದು ಕಾರಣ ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು
ಜೀವ ಹಿಂಸೆಯ ಮಾಡುವ ಮಾದಿಗರ ನೇನೆಂಬೆನಯ್ಯಾ

ತನ್ನ ಮನೆಯಲ್ಲಿ ಯಾರಾದರೂ ಸತ್ತರೆ ಗೋಳು ಹೊಯ್ದುಕೊಂಡು ಅಳುವ ವ್ಯಕ್ತಿ ಪ್ರಾಣಿಗಳನ್ನು ಮೀನುಗಳನ್ನು ಕೊಲ್ಲುವಾಗ ಏಕೆ ಮರುಗುವುದಿಲ್ಲ? ಅಲ್ಲಿ ಅವರ ಹೃದಯ ಕಲ್ಲಾಗಿರುತ್ತದೆ. ಇಂಥ ಹೃದಯದಲ್ಲಿ ದೇವನಿರಲಾರ.

ಸರ್ವಜ್ಞ ಕವಿಯೂ ಕೂಡ ಪ್ರಾಣಿ ಹಿಂಸೆ ಮಾಡುವವರು ನರಕಕ್ಕೆ ಹೋಗಬೇಕಾಗುತ್ತದೆ ಎನ್ನುತ್ತಾನೆ.

ಕೊಲ್ಲದಿಪ್ಪ ಧರ್ಮವೆಲ್ಲರಿಗೆ ಸನುಮತವು
ಅಲ್ಲದನು ಮೀರಿ ಮಾಡುವನು। ನರಕಕ್ಕೆ
ನಿಲ್ಲದೆ ಹೋಹ ಸರ್ವಜ್ಞ॥

ಗುರು ಬಸವಣ್ಣನವರು, ನಮಗೆ ಸಪ್ತಸೂತ್ರದ ವಚನ ಕೊಟ್ಟಿದ್ದಾರೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ,

ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸ ಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಲಿಂಗದೇವರನೊಲಿಸುವಪರಿ.

ಇಂದಿನ ಕಾನೂನಿನ ಪ್ರಕಾರ ಕೊಲೆ ಮಾಡಿದವನಿಗೆ ಎಷ್ಟು ಶಿಕ್ಷೆ ದೊರಕುತ್ತದೆಯೋ ಕೊಲೆ ಮಾಡಲು ಪ್ರೇರಣೆ, ಪ್ರೋತ್ಸಾಹ ನೀಡಿದವರಿಗೂ ಅಷ್ಟೇ ಶಿಕ್ಷೆ ದೊರಕುತ್ತದೆ. ಅದೇ ರೀತಿ ಮಾಂಸಹಾರ ಸೇವನೆ ಮಾಡುವಂಥವರು ಯಾರೇ ಇರಲಿ ಅವರೂ ಅಪರೋಕ್ಷವಾಗಿ ಕೊಲೆ ಮಾಡಿದಂತೆಯೇ. ಅದಕ್ಕೆ ದೇವರು ಶಿಕ್ಷೆ ಕೊಟ್ಟೇ ಕೊಡುತ್ತಾನೆ. ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಹಸುವಿಗೆ ಅತ್ಯಂತ ಗೌರವದ ಸ್ಥಾನವಿದೆ. 'ಕಾಮಧೇನು' ಎಂದು ಭಾರತೀಯ ಹಸುವನ್ನು ಕರೆಯುತ್ತಾರೆ. ಕಾರಣ, ಅದರ ಮೂತ್ರ, ಸಗಣಿ ಎಲ್ಲವೂ ಅತ್ಯಂತ ಉಪಯುಕ್ತವಾದುದು. ಇಂದು ಮಾಂಸಹಾರಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಗೋ-ಸಂತತಿ ಅಳಿಯುತ್ತಿದೆ ಇದು ಅತ್ಯಂತ ದುಃಖಕರವಾದ ಸಂಗತಿಯಾಗಿದೆ.

ಮಾಂಸಹಾರ ಮಾಡುವುದರಿಂದ ರಕ್ತದೊತ್ತಡ ಮತ್ತು ಹೃದಯಾಘಾತದಂಥ ಭಯಂಕರ ಕಾಯಿಲೆ ಬರುತ್ತವೆ. ದೇಹದಲ್ಲಿ ಕೊಬ್ಬಿನಾಂಶ ಜಾಸ್ತಿಯಾಗುತ್ತದೆ. ಸಾಮನ್ಯವಾಗಿ ಸಸ್ಯಹಾರಿಗಳು ಸಾತ್ವಿಕರಾಗಿರುತ್ತಾರೆ, ಆದರೆ ಮಾಂಸಹಾರಿಗಳಲ್ಲಿ ಕ್ರೂರ ಪ್ರವೃತ್ತಿ ಬೆಳೆದಿರುತ್ತದೆ. 100 ಸಸ್ಯಾಹಾರಿಗಳು ಬದುಕಲಿಕ್ಕೆ, ದವಸ, ಧಾನ್ಯ ಬೆಳೆಯಲು ಒಂದು ಎಕರೆ ಜಾಗ ಸಾಕಾದರೆ, ಅದೇ 100 ಮಾಂಸಹಾರಿಗಳು ಬದುಕಲಿಕ್ಕೆ ಮೂರು ಎಕರೆ ಜಮೀನು ಬೇಕಾಗುತ್ತದೆ. ಕಾರಣ ಅವರು ತಿನ್ನುವ ಪ್ರಾಣಿಗಳನ್ನು ಕೂಡ ಸಾಕಬೇಕಾಗುತ್ತದೆಯಲ್ಲ ಅದಕ್ಕೆ. "Nature can serve every bodys needs but not greeds" ''ನಿಸರ್ಗವು ಎಲ್ಲರ ಅವಶ್ಯಕತೆಗಳನ್ನು ಪೂರೈಸುತ್ತದೆಯೇ ಹೊರತು ಲೋಭವನ್ನಲ್ಲ'' ಎಂದು ಗಾಂಧೀಜಿ ಹೇಳಿದ್ದಾರೆ.

ಲಿಂಗಾಯತರಾದವರು, ಮಾಂಸಹಾರಿಗಳ ಮನೆಯಲ್ಲಿ ಪ್ರಸಾದವನ್ನು ಕೂಡ ಮಾಡಬಾರದು ಎನ್ನುವ ನಿಯಮವಿದೆ. ಆದರೆ ಇಂದು ಅನೇಕ ಜನ ಲಿಂಗಾಯತರೇ ಮಾಂಸಹಾರ ಮಾಡುತ್ತಿರುವುದರಿಂದ ಇತರ ಧರ್ಮವಂತರೂ ಕೂಡ ತಲೆ ತಗ್ಗಿಸುವಂತಾಗಿದೆ. ನಾನು ಅನೇಕರಿಗೆ ಮಾಂಸಹಾರ ಒಳ್ಳೆಯದಲ್ಲ ಮಾಡಬೇಡಿರಿ ಎಂದು ಹೇಳಿದಾಗ. ''ಅನೇಕ ಜನ ಲಿಂಗಾಯತರೂ ನನಗೆ ಗೆಳೆಯರಿದ್ದಾರೆ ಅವರೆಲ್ಲರೂ ಮಾಂಸಹಾರ ಮಾಡುತ್ತಾರೆ'' ಎಂದರು. ಇದು ಕೇಳಿ ನನಗಾದ ನೋವು ಅಷ್ಟಿಷ್ಟಲ್ಲ. ಅನೇಕರು ಮಾಂಸಹಾರ ಮಾಡಿದರೆ ಶಕ್ತಿ ಬರುತ್ತದೆ ಎನ್ನುತ್ತಾರೆ ಇದು ಸುಳ್ಳು. ಮಾಂಸಹಾರವನ್ನು ಕೇವಲ ನಾಲಿಗೆಯ ರುಚಿಗಾಗಿ ಮಾಡುತ್ತಾರೆ ಎಂದು ಕೇಳಿದ್ದೇನೆ.

ನಾಲಿಗೆಯ ಕಟ್ಟಿದವ ಕಾಲಂಗೆ ದೂರಹನು
ನಾಲಿಗೆಯ ರುಚಿಯ। ಮೇಲಾಡುತ್ತಿರಲವನ

ಕಾಲ ಹತ್ತಿರವು ಸರ್ವಜ್ಞ॥

ಎಂದು ಸರ್ವಜ್ಞ ಕವಿಯೂ ಹೇಳುತ್ತಾರೆ. ಸಸ್ಯಾಹಾರದಲ್ಲಿ ಇರುವಷ್ಟು ಶಕ್ತಿ ಮಾಂಸಹಾರದಲ್ಲಿಲ್ಲ. ಜಗತ್ತಿನ ಅತ್ಯಂತ ಶಕ್ತಿ ಶಾಲಿಯಾದ ಪ್ರಾಣಿ ಆನೆ, ಅದು ಸಸ್ಯಾಹಾರಿ. ಜಗತ್ತಿನ ಅತ್ಯಂತ ಚುರುಕಾದ ಪ್ರಾಣಿ ಜಿಂಕೆ ಅದು ಸಸ್ಯಾಹಾರಿ, ಓಟಕ್ಕೆ ಪ್ರಸಿದ್ದವಾದ ಪ್ರಾಣಿ ಕುದುರೆ ಅದು ಸಸ್ಯಾಹಾರಿ ಮರುಭೂಮಿಯ ಹಡಗು (Ship of Desert) ಎಂದೇ ಪ್ರಸಿದ್ಧವಾದ ಒಂಟೆ, ಅದೂ ಸಸ್ಯಾಹಾರಿಯೇ. ವಿದ್ಯುತ್ ಉಪಕರಗಳ ಸಾಮರ್ಥವನ್ನು ಮತ್ತು ಶಕ್ತಿಯನ್ನು, ಅಶ್ವಶಕ್ತಿ (Horse Power-HP)ಯಲ್ಲಿ ಅಳತೆ ಮಾಡುತ್ತಾರೆ. ನೀರೆತ್ತುವ ಪಂಪಿಗೆ ಜೋಡಿಸಿರುವ ಮೋಟಾರ್‌ನ್ನು 3 ಅಶ್ವಶಕ್ತಿ 6 ಅಶ್ವಶಕ್ತಿ ಎಂದು ಅಳತೆ ಮಾಡುತ್ತಾರೆಯೇ ಹೊರತು ಹುಲಿಶಕ್ತಿ, ಸಿಂಹ ಶಕ್ತಿ ಎಂದು ಅಳತೆ ಮಾಡುವುದಿಲ್ಲ. ಆದ್ದರಿಂದ ಬಂಧುಗಳೇ ಇನ್ನೂ ಯಾರಾದರೂ ಮಾಂಸಹಾರ ಮಾಡುತ್ತಿದ್ದರೆ ದಯವಿಟ್ಟು ಬಿಟ್ಟು ಬಿಡಿ.

ಇಲ್ಲಿಯವರೆಗೆ ಅನೇಕರು ಮಾಂಸಹಾರ ಮಾಡಿದ್ದೇನೆ. ಇದಕ್ಕೆ ಏನು ಪರಿಹಾರ, ಈಗಾಗಲೇ ನನಗೆ ಪಾಪ ಬಂದಿದೆ ಎಂದು ಯಾರಿಗಾದರೂ ಪಾಪ ಪ್ರಜ್ಞೆ ಕಾಡುತ್ತಿದ್ದರೆ, ಮುಂದೆ ಏನು ಮಾಡಬೇಕು ಎಂದು ಯೋಚನೆಯುಂಟಾಗುತ್ತಿದ್ದರೆ, ಅದಕ್ಕೊಂದು ಸುಲಭವಾದ ದಾರಿಯಿದೆ. ಪ್ರತಿಯೊಬ್ಬರೂ ತಪ್ಪು ಮಾಡುತ್ತಾರೆ. ಅದಕ್ಕೆ ಪಶ್ಚಾತ್ತಾಪವೊಂದೇ ಪರಿಹಾರ. ಇಂಥವರನ್ನು ಗುರು ಬಸವಣ್ಣನವರು ಅಭಯಹಸ್ತ ನೀಡಿ ಕರೆಯುತ್ತಿದ್ದಾರೆ.

ಎಲವೂ ಎಲವೋ ಪಾಪಕರ್ಮವ ಮಾಡಿದವನೆ
ಎಲವೋ ಎಲವೋ ಬ್ರಹ್ಮ ಹತ್ಯವ ಮಾಡಿದವನೆ
ಒಮ್ಮೆ ಶರಣೆನ್ನೆಲವೋ
ಸರ್ವಪ್ರಾಯಶ್ಚಿತಕ್ಕೆ ಹೊನ್ನ ಪರ್ವತಂಗಳಾದಡೆಯೂ ಸಾಲವು
ಓರ್ವಂಗೆ ಶರಣೆನ್ನು ನಮ್ಮ ಲಿಂಗದೇವಂಗೆ.

ನಾವು ಮಾಡಿರುವ ಪಾಪಗಳಿಗಾಗಿ ಪ್ರಾಯಶ್ಚಿತ ಮಾಡಿಕೊಳ್ಳಲು ಹೋದರೆ, ಹೊನ್ನಿನ ಪರ್ವತಗಳಾದರೂ ಸಾಲವು ಎಷ್ಟೇ ದುಡ್ಡು ಖರ್ಚು ಮಾಡಿ, ಗುಡಿಗುಂಡಾರ ಸುತ್ತಿದರೂ ಪಾಪ ಹೋಗಲಾರದು. ಅದಕ್ಕಾಗಿ ದೇವರಿಗೆ ಗುರುವಿಗೆ ಶರಣೆಂದು ಪಶ್ಚಾತ್ತಾಪದ ಕಣ್ಣೀರಿನನಲ್ಲಿ ಮಿಂದು ಪಾವನರಾಗಬೇಕು.

ಲಿಂಗಾಯತ ಧರ್ಮ ಶುದ್ಧ ಸಸ್ಯಾಹಾರಿಗಳ ಧರ್ಮ. ಯಾರಾದರೂ ಲಿಂಗಾಯತರೆನಿಸಿಕೊಂಡವರು ಮಾಂಸಹಾರ ಮಾಡುತ್ತಿದ್ದರೆ ಅವರನ್ನು ತಿದ್ದುವ ನೈತಿಕ ಹಕ್ಕು ನಮಗಿದೆ. ಅಂಥವರನ್ನು ಶರಣ ಬಂಧುಗಳು ತಿದ್ದಬೇಕು. ಮಕ್ಕಳಲ್ಲೂ ಕೂಡ ಈ ಬಗ್ಗೆ ಅರಿವನ್ನು ನೀಡುತ್ತ, ನಮ್ಮ ಧರ್ಮದ ಶ್ರೇಷ್ಠ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಕುಲಜರಾಗೋಣ. ಗುರು ಬಸವಣ್ಣನವರ ಕರುಣೆ ಸಕಲ ಜೀವಾತ್ಮರಿಗೆ ಹರಿದುಬರಲಿ ಎಂದು ಪ್ರಾರ್ಥಿಸುತ್ತಾ ನನ್ನ ಲೇಖನಿಗೆ ವಿರಾಮ ಕೊಡುತ್ತೇನೆ.

ಬಸವ ಬಲ

- ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ

ಅರ್ಥವನನರ್ಥವ ಮಾಡಿ ಕೋಳಾಹಳಂಗೈಯ್ಯುತ್ತಿರಲಿ
ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ,
ಮುಟ್ಟುವ ಸ್ತ್ರೀಯ ಕಣ್ಣ ಮುಂದೆ
ಅಭಿಮಾನಂಗೊಂಡು ನೆರವುತ್ತಿರಲಿ;
ಇಂತೀ ತ್ರಿವಿಧವು ಹೊರಗಣವು,
ಇನ್ನೆನ್ನಂಗದ ಮೇಲೆ ಬರಲಿ,
ಹಿಡಿಖಂಡವ ಮಾಡಿ ಕೊಯ್ಯಲಿ,
ಇಕ್ಕುವ ಶೂಲ ಪ್ರಾಪ್ತಿಸಲಿ,
ಹಾಕ್ಕೊಂದೆಸೆ, ಹನ್ನೊಂದೆಸೆಯಾಗಿ ಮಾಡುತ್ತಿರಲಿ;
ಮತ್ತೆಯೂ ಲಿಂಗಾರಾಧನೆಯ ಮಾಡುವೆ
ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆ!
ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದಡೆ
ನೀನಂದೆ ಮೂಗ ಕೊಯ್ಯಿ, ಲಿಂಗದೇವಾ! - ಬ.ವ.ದೀ.704

ಶರಣ ಬಂಧುಗಳೇ, ಧರ್ಮಪಿತ ಗುರು ಬಸವ ತಂದೆಯವರ ಈ ವಚನವನ್ನು ತಾವು ಎಂದಾದರೂ ಕೇಳಿದ್ದೀರಾ....? ಓದಿದ್ದೀರಾ....? ಮನನ ಮಾಡಿದ್ದೀರಾ...? ಭಯ ಹುಟ್ಟಿಸುವ ಇಂಥ ಚಾಣಾಕ್ಷ ವಚನವನ್ನು ಏಕೆ ಬರೆದಿರಬಹುದೆಂದು ಚಿಂತಿಸಿದ್ದೀರಾ...? ಅರ್ಥವನ್ನು ಅನುಭವಿಸಿದ್ದೀರಾ...? ಹಾಗಿದ್ದರೆ ಒಳ್ಳೆಯದು. ಇಲ್ಲದಿದ್ದರೆ ಈ ವಚನವನ್ನು ಅರ್ಥೈಸುವ ಪ್ರಯತ್ನ ಮಾಡೋಣ. ಭಕ್ತನ ಜೀವನದಲ್ಲಿ ಇದರ ಪಾತ್ರ ಏನು ಎಂದು ನೋಡೋಣ.

ನಿಮಗೊಂದು ವಿಷಯ ಗೊತ್ತಿದೆಯೇ...? ಗೊತ್ತಿದ್ದರೆ ಹೇಳಿ! ಗೊತ್ತಿಲ್ಲದಿದ್ದರೆ ಕೇಳಿ!! ಏನೆಂದರೆ ಜೀವನದಲ್ಲಿ ಬಂದೆರಗಲಿರುವ ಕಷ್ಟಗಳು "ನಿಮ್ಮನ್ನು ಹೆದರಿಸುವುದಿಲ್ಲ, ಬಾಧಿಸುವುದಿಲ್ಲ, ನಿಮ್ಮ ಹತ್ತಿರ ಸುಳಿಯುವುದಿಲ್ಲ" ಎಂದು ಒಪ್ಪಂದ ಮಾಡಿಕೊಂಡಿವೆಯೇ ?! ಇಲ್ಲ ಅಲ್ಲವೆ? ಅದರಲ್ಲೂ ಗುರು ತೋರಿದ ಸನ್ಮಾರ್ಗದಲ್ಲಿ ಧ್ಯೇಯವಾದಿಯಾಗಿ ಸಾಗುತ್ತಿರುವ ಭಕ್ತ ಅಥವ ಸಾಧಕವನ್ನೇ ಗುರಿಯಾಗಿರಿಸಿಕೊಂಡು ಇವು ಕಾಡುವುದೇ ಹೆಚ್ಚು, ಅದನ್ನು ಮಹಾತ್ಮರ ಶರಣರ ಜೀವನದಿಂದ ತಿಳಿಯಬಹುದು. ಏಕೆಂದರೆ ಕಷ್ಟಗಳು ಎಂದಿಗೂ ಕಷ್ಟಗಳು ತಮ್ಮಿಂದ ತಾವೇ ಬರುವುದಿಲ್ಲ! ದುರ್ಜನರ ಸಂಗದಿಂದ ದೂರವಿದ್ದರೂ ಸಜ್ಜನರ ಸದ್ಗುಣ, ಸಾತ್ವಿಕತೆಗಳನ್ನೇ ದೌರ್ಬಲ್ಯಗಳೆಂದು ಭಾವಿಸಿದ ಗುಣಹೀನರಿಂದ ತಾಪತ್ರಯಗಳು ಒದಗಿ ಬರುತವೆ. ಎಂಬುದು ಅನುಭವ ವೇದ್ಯ. ಈ ಕಾರಣಕ್ಕಾಗಿಯೇ ಜಗನ್ಮಾತಾ ಅಕ್ಕಮಹಾದೇವಿ ತಾಯಿ ಹೇಳುತ್ತಾರೆ.

"ವಿಧಿಯ ಮೀರಿದ ಅಮರರಿಲ್ಲ"

"ಹಿಂದೆ ಮಾಡಿದ ಹೀನಂಗಳೆಲ್ಲವ ತಂದು
ಮುಂದಿಳುಹಲು ನಿನಗೇನು ಹಾನಿಯೆ
ಚನ್ನಮಲ್ಲಿಕಾರ್ಜುನ" ಎಂದು.

ಏಕೆ ಹೀಗೆ? ಅಂದರೆ ಒಬ್ಬ ಆದರ್ಶ ಭಕ್ತ ಅಥವ ಸಾಧಕನಿಗೆ ವೈಯಕಿಕವಾಗಿ ಹುಟ್ಟುವ ಅರಿಷಡ್ವರ್ಗಗಳನ್ನು ಜಯಿಸುವುದು ಸುಲಭ. ಆದರೆ ಸಾಮಾಜಿಕವಾದ ಅರಿಷಡ್ವರ್ಗ, ಅಷ್ಟಮದ, ಷಡೂರ್ಮಿಗಳನ್ನು ಜಯಿಸುವುದು ಕಠಿಣಸಾಧ್ಯ. ಆದ್ದರಿಂದ ಇಂಥ ಸಂಕಷ್ಟ ಕಾಲದಲ್ಲಿ "ಹರ ಕೊಲ್ಲಲ್ ಗುರು ಕಾಯ್ವನು ಎಂಬಂತೆ, ಗುರು ಬಸವಣ್ಣನವರು ನಂಬಿದ ಭಕ್ತನ ಪಾಲಿಗೆ ನೈತಿಕ ಆಸರೆಯಾಗಿ ನಿಲ್ಲುತ್ತಾರೆ; ಬಲವನ್ನು ತುಂಬುತ್ತಾರೆ.

"ಕೊಲುವನೆಂಬ ಭಾಷೆ ದೇವನದಾದರೆ
ಗೆಲುವನೆಂಬ ಭಾಷೆ ಭಕ್ತನದು" ಎಂದು.

ಇಲ್ಲಿ ದೇವರು ಎಂದಿಗೂ ಭಕ್ತನ ದೌರ್ಬಲ್ಯ, ದುರ್ಗುಣ, ದುಶ್ಚಟ, ದುರ್ವ್ಯಸನಗಳಿಗೆ

ಪೋಷಕನಾಗಿ ನಿಲ್ಲಲ್ಲು ಸಿದ್ಧನಿಲ್ಲ. ಅವನೇನಿದ್ದರೂ ಸದ್ಗುಣ, ಸದ್ಭಕ್ತತೆಗಳ ಜನಕ ಎಂಬುದನ್ನು ಸಮರ್ಥಿಸುತ್ತಿದ್ದಾರೆ. ಅಂತೆಯೇ ಭಕ್ತನ ಅಸಲಿ - ನಕಲಿ ವ್ಯಕ್ತಿತ್ವಗಳನ್ನು ತನು ಮನ ಧನಗಳನ್ನು ಅಲ್ಲಾಡಿಸುವ ಮೂಲಕ ಪರೀಕ್ಷಿಸುತ್ತಾನೆ. ಇದಕ್ಕೆ ಅಂಜದಿದ್ದರೆ ಮಾತ್ರ ಮುದ್ದಿನಿಂದ ಎತ್ತಿಕೊಳ್ಳುತ್ತಾನೆ.

ಈ ವಚನ ತನ್ನ ಅಂತಃಸತ್ವವನ್ನು ಬಿಂಬಿಸಲು ಸಮಾಜದ ನಡುವೆ ಬದುಕುತ್ತಿರುವ ಒಬ್ಬ ಸದ್ಗೃಹಸ್ಥನನ್ನು ಆರಿಸಿಕೊಂಡಿರುವುದು ಒಂದು ವಿಶೇಷ. ಏಕೆ ಗೊತ್ತೆ..? ಸ್ವಾಮಿ ವಿವೇಕನಂದರು ಒಂದು ಕಡೆ ಹೀಗೆ ಹೇಳಿದ್ದಾರೆ. "ಒಬ್ಬ ಆದರ್ಶ ಸನ್ಯಾಸಿಯಾಗಿ ಬಾಳುವುದಕ್ಕಿಂತ ಒಬ್ಬ ಆದರ್ಶ ಗೃಹಸ್ಥನಾಗಿ ಬದುಕುವುದು ಕಷ್ಟ" ಎಂದು. ಏಕೆಂದರೆ ಸನ್ಯಾಸಿಯಾದವನಿಗೆ ತ್ಯಾಗದ ನೆಪದಿಂದಲೋ, ಮುಕ್ತಿಯ ಸ್ವಾರ್ಥದಿಂದಲೋ, ಬರಲಿರುವ ಕಷ್ಟಗಳಿಗೆ ಹೆದರಿಕೊಂಡೋ ಜವಾಬ್ದಾರಿಗಳು ಮತ್ತು ಸಮಸ್ಯೆಗಳಿಂದ ನುಣುಚಿಕೊಂಡು ಪಲಾಯನಗೈಯ್ಯುವುದು ಬಹು ಸುಲಭ. ಇಂಥ ಒಂದು ಅಮೂಲ್ಯವಾದ ಸ್ವಾತಂತ್ರ್ಯವನ್ನು ಅವನು ತನ್ನ ಜೋಳಿಗೆಯಲ್ಲಿ ಭದ್ರವಾಗಿಟ್ಟುಕೊಂಡೇ ಸಾಮಾಜಿಕ ರಂಗಕ್ಕೆ ಧುಮುಕುತ್ತಾನೆ. ಆದರೆ ಗೃಹಸ್ಥನ ಜೀವನ ಹೀಗಲ್ಲ. ಜಗತ್ತಿನ ಮಹಾಪ್ರಲೋಭನೆಗಳಾದ ಹೆಣ್ಣು (ಗಂಡು), ಹೊನ್ನು -ಮಣ್ಣು, ಅಧಿಕಾರಗಳನ್ನು ಹಿಡಿದುಕೊಂಡೇ ಧರ್ಮ ಮಾರ್ಗದಲ್ಲಿ ಯಶಸ್ವಿಯಾಗಿ ಸಾಗಲು ಪಣತೊಟ್ಟಿರುತ್ತಾನೆ. ಹೀಗಾಗಿ ಈ ನಾಲ್ಕು ನೇರವಾಗಿ ಬಾಧಿಸುವುದು ಇವನನ್ನೇ. ಎಂಬುದು ಕ್ರೂರ ಸತ್ಯ.

ಸಾಮಾನ್ಯವಾಗಿ ಜಗತ್ತಿನಲ್ಲಿ ವ್ಯಕ್ತಿಗೆ, ಸಂಸ್ಥೆಗೆ ಸಮಾಜಕ್ಕೆ ಅಥವ ದೇಶಕ್ಕೆ ಕಳಂಕ ಹಚ್ಚಲು, ಅಪಮಾನ ಮಾಡಲು, ತೇಜೋವಧೆ ಮಾಡಲು ಸ್ವಾರ್ಥಿಗಳು, ಸಂದೇಹವಾದಿಗಳು, ವಿರೋಧಿಗಳು ಮುಖ್ಯವಾಗಿ ಬಳಸಿಕೊಳ್ಳುವುದು ಹೆಣ್ಣು, ಗಂಡು, ಹೊನ್ನು, ಮಣ್ಣು ಮತ್ತು ಅಧಿಕಾರಗಳನ್ನು ಎಂಬುದು ಗಮನಾರ್ಹ. ಇವುಗಳನ್ನು ಮುಂದಿಟ್ಟುಕೊಂಡು ಸದರ್ಥಗಳನ್ನೇ ಅನರ್ಥಗಳನ್ನಾಗಿ ಮಾಡಿ ಅಪಪ್ರಚಾರಗಳಿಂದ ಕೋಲಾಹಲಗೈಯ್ಯುತ್ತಾರೆ. ಇಂಥ ಕುಕೃತ್ಯಗಳಿಗೆ ದುಷ್ಕರ್ಮಿಗಳು ಕರಪತ್ರ, ಸ್ಥಳೀಯ ಕೀಳು ಅಭಿರುಚಿಯ ಪತ್ರಿಕೆಗಳನ್ನು ಅವಲಂಬಿಸುತ್ತಾರೆ. ಈಗಿನ ವಿದ್ಯುನ್ಮಾನ ಯುಗದಲ್ಲಿ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ, ಸುದ್ದಿಗಳ ಅಭಾವದಿಂದ ನರಳುತ್ತಿರುವ ಟಿ.ವಿ., ಮೊಬೈಲ್, ಅಂತರ್ಜಾಲಗಳ ಮೂಲಕ ಕ್ಷಣಮಾತ್ರದಲ್ಲಿ ಸುದ್ದಿಗಳನ್ನು ಎಲ್ಲಾ ಕಡೆ ಬಿತ್ತರಿಸುತ್ತಾರೆ. ತನ್ಮೂಲಕ ಸಂಬಂಧಪಟ್ಟವರಿಗೆ ಬೆದರಿಕೆ ಹಾಕಿ ಸುಲಭದಲ್ಲಿ ಹಣ ಮಾಡುವ ದಂಧೆಗೆ ಇಳಿಯುತ್ತಾರೆ. ಇಂಥ ವಿಷಯಗಳಲ್ಲಿ ಭಕ್ತನ ಮಾನ ಮರ್ಯಾದೆಯನ್ನು ಸಂಪೂರ್ಣವಾಗಿ ಗುತ್ತಿಗೆ ಹಿಡಿದಂತೆ ವಿರೋಧಿಗಳು ಮತ್ತು ಮಾಧ್ಯಮದವರು ವರ್ತಿಸುತ್ತಾರೆ. ಆದರೆ ದುರುದ್ದೇಶದಿಂದ ಮಾಡುವ ಇಂಥ ಅಗ್ಗದ ಅಪಪ್ರಚಾರಗಳಿಗೆ, ಕೋಲಾಹಲಕ್ಕೆಲ್ಲ ಭಕ್ತನು ಹೆದರದೆ, ಯಾವ ಒತ್ತಡಕ್ಕೂ ಮಣಿಯದೆ ಜೀವನದ ಹಾದಿಯಲ್ಲಿ ಛಲದಿಂದ ಮುಂದುವರೆಯುತ್ತಾನೆ. ಗುರು ಬಲದಿಂದ ತನ್ನ ಧೃಡವಾದ ನಿಲವನ್ನು ಹೀಗೆ ಹೇಳುತ್ತಾರೆ.

ನ್ಯಾಯ ನಿಷ್ಠುರಿ ದಾಕ್ಷಿಣ್ಯಪರನು ನಾನಲ್ಲ;
ಲೋಕವಿರೋಧಿ ಶರಣನಾರಿಗಂಜುವನಲ್ಲ
ಲಿಂಗದೇವನ ರಾಜತೇಜದಲ್ಲಿಪ್ಪೆನಾಗಿ
ಬ.ವ.ದೀ.-750

ವ್ಯಕ್ತಿಗತವಾದ ತೇಜೋವಧೆಯನ್ನು ಸಮರ್ಥವಾಗಿ ದಾಟಿ ಮುಂದೆ ಸಾಗುವಾಗಲೇ ಇದರಿಂದ ತೃಪ್ತಿ ಕಾಣದ ದುಷ್ಕರ್ಮಿಗಳು ತನ್ನನ್ನು ನಂಬಿ, ಅವಲಂಬಿಸಿದ, ಪ್ರೀತಿಪಾತ್ರರಾದ ಸತಿಸುತರೆಡೆಗೂ ತಮ್ಮ ದುಷ್ಕೃತ್ಯವನ್ನು ವಿಸ್ತರಿಸುತ್ತಾರೆ. ಮಕ್ಕಳನ್ನು ಕೊಂದು ಸೇಡು ತೀರಿಸಿಕೊಳ್ಳುವ, ಆತ್ಮಾಭಿಮಾನಕ್ಕೆ ಧಕ್ಕೆ ತರಲು ತನ್ನ ಅರ್ಧಾಂಗಿಣಿಯನ್ನು ದೈಹಿಕವಾಗಿ, ಮಾನಸಿಕವಾಗಿ ಕೆಣಕುವ ಹೀನ ಮಟ್ಟಕ್ಕೂ ಇಳಿಯುತ್ತಾರೆ. ಇಲ್ಲಿ ಸತಿಸುತರ ಅತಿಮೋಹ ತರವಲ್ಲ ಎಂದು ಗೊತ್ತಿದ್ದರೂ ತನ್ನನ್ನು ಅವಲಂಬಿಸಿರುವವರನ್ನು ರಕ್ಷಿಸಬೇಕೆಂಬ ಸದುದ್ದೇಶದಿಂದಲೇ ಹೋರಾಡುತ್ತಾನೆ. ಇಂಥ ತ್ರಿವಿಧ ರೂಪದ ಹೊರಗಿನ ಕಂಟಕ, ಗಂಡಾಂತರಗಳನ್ನು ಯಶಸ್ವಿಯಾಗಿ ಎದುರಿಸುತ್ತಿರುವಾಗುಲೇ ವಿರೋಧಿಗಳ ಕಣ್ಣು ನೇರವಾಗಿ ಭಕ್ತನ ಕಡೆಗೆ ತಿರುಗುತ್ತದೆ. ಎಲ್ಲಾ ದಿಕ್ಕಿನಿಂದಲೂ ಅವನನ್ನು ತುಳಿಯುವುದೇ ಅವರ ಗುರಿಯಾಗುತ್ತದೆ. ಆದರೂ ಅವನು ಹೆದರದೆ, ಅಂಜದೆ, ಅಳುಕದೆ ಛಲತೊಟ್ಟು ನಿಲ್ಲುತ್ತಾನೆ. ಇಷ್ಟೆಲ್ಲಾ ತೊಂದರೆಗಳಾದರೂ ಅವನು ಮಾತ್ರ ಧರ್ಮಮಾರ್ಗದಿಂದ

ಪಕ್ಕಕ್ಕೆ ಸರಿಯುವುದಿಲ್ಲ. ವಿರೋಧಿಗಳೊಂದಿಗೆ, ಕಷ್ಟಗಳೊಂದಿಗೆ ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ!!

ಇಂಥ ಹಲವಾರು ಸಮಸ್ಯೆಗಳ ನಡುವೆಯೂ ಸಮಚಿತ್ತತೆಯನ್ನು ಕಾಯ್ದುಕೊಳ್ಳಲು ತಪ್ಪದೆ ಲಿಂಗಾರಾಧನೆಯನ್ನು ಮಾಡುತ್ತಾನೆ. ಸ್ಥಿತಪ್ರಜ್ಞತೆಯನ್ನು ಅಳವಡಿಸಿಕೊಳ್ಳಲು ಶ್ರಮಿಸುತ್ತಾನೆ. ಗುರು ಹಿರಿಯರ ಸೇವೆಗೈಯ್ಯುತ್ತಾನೆ. ಜಂಗಮ ಪುಂಗವರನ್ನು ಆಶ್ರಯಿಸಿ, ಆದರಿಸಿ ಸತ್ಕರಿಸಿ ಗೌರವಿಸುತ್ತಾನೆ. ಸಕಾಲದಲ್ಲಿ ಸೂಕ್ತ ಮಾರ್ಗದರ್ಶನ ಪಡೆಯುತ್ತಾನೆ. ಅವರ ಅನುಗ್ರಹಕ್ಕಾಗಿ ಹಂಬಲಿಸುತ್ತಾನೆ.

ಜೀವನದಲ್ಲಿ ಒದಗಿ ಬರುವ ಕಷ್ಟಗಳನ್ನು ಶಿಕ್ಷೆ ಎಂದು ಭಾವಿಸದೆ ಪರೀಕ್ಷೆ ಅಥವಾ ಸವಾಲು ಎಂದು ಸ್ವೀಕರಿಸಲು ಸಿದ್ಧನಾಗುತ್ತಾನೆ. ಲಿಂಗ ಭಕ್ತನು ಇಂಥ ಸಾತ್ವಿಕ ಕೆಚ್ಚನ್ನು, ದಿವ್ಯಬಲವನ್ನು ಷಣ್ಮುಖ ಶಿವಯೋಗಿಗಳು ತಮ್ಮ ವಚನದಲ್ಲಿ ಹೀಗೆ ಪ್ರತಿಬಿಂಬಿಸುತ್ತಾರೆ.

ತೊತ್ತಿಂಗೆ ಒಡತಿಯ ಬಲವಯ್ಯ
ಬಡವಂಗೆ ಬಲ್ಲಿದನ ಬಲವಯ್ಯ .
ಆಳಿಂಗೆ ಅರಸನ ಬಲವಯ್ಯ
ನನಗೆ ಗುರು ಲಿಂಗ ಜಂಗಮದ ಬಲವಯ್ಯ
ಅಖಂಡೇಶ್ವರಾ.

ಇದನ್ನರಿತೇ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರು ಬೋಧಿಸುತ್ತಿದ್ದರು. "ಓರ್ವ ಭಕ್ತ ಅಥವ ಸಾಧಕ ಗೌರವಾರ್ಹನಾಗುವುದು ತನ್ನಿಂದ ತಾನೇ ಅಲ್ಲ. ಗುರು ಲಿಂಗ ಜಂಗಮದ ಕರುಣೆಯಿಂದ ಅವರ ಆಶ್ರಯದಿಂದ. ಅದುವೇ ನಿಜವಾದ ಬಲ. ಅದಿಲ್ಲದೇ ಮನುಷ್ಯ ನಿರ್ಬಲ. ಅವನ ಮನಸ್ಸು ದುರ್ಬಲ." ಎಂದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹದೇವಿ ತಾಯಿಯವರು ತಮ್ಮ ಶಿಷ್ಯವೃಂದಕ್ಕೆ ಕರೆ ನೀಡುವುದು ಹೀಗೆ... "ನೋಡಿ ಜಗತ್ತಿನಲ್ಲಿ ದುಷ್ಟರು ಎಷ್ಟೊಂದು ಧೈರ್ಯದಿಂದ ಕೆಟ್ಟಕೆಲಸಗಳನ್ನು ಮಾಡುತ್ತಾರೆ. ಅಂದಾಗ ನೀವೇಕೆ ಒಳ್ಳೆಯ ಕೆಲಸಗಳನ್ನು ಮಾಡಲು ಹೆದರುತ್ತೀರಿ. ಧೈರ್ಯವಾಗಿ ಮುನ್ನುಗ್ಗಿರಿ." ಎಂದು.

ಗುರು ಲಿಂಗ ಜಂಗಮರ ಕರುಣೆಯಿಲ್ಲದೆ ಬದುಕಲು ಸಾಧ್ಯವಿಲ್ಲವೆ? ಎಂಬ ಸಂದೇಹ ಕಾಡುತ್ತದೆ ಅಲ್ಲವೆ? ಇದನ್ನು ಒಂದು ದೃಷ್ಟಾಂತದ ಮೂಲಕ ಅರಿಯೋಣ.

ಒಮ್ಮೆ ಹೀಗಾಯಿತು. ಬೆಂಗಳೂರಿನ ಸುತ್ತಮುತ್ತ ಇತ್ತೀಚೆಗೆ ಭೂಗಳ್ಳರ ಸಂಖ್ಯೆ ಬೆಳೆಯುತಿದೆ. ಅವರಲ್ಲಿ ಧನದಾಹಕ್ಕಿಂತಲೂ ಭೂದಾಹ ಅಧಿಕವಾಗಿ ನೂರಾರು ಎಕರೆ ಅರಣ್ಯ ಪ್ರದೇಶಗಳನ್ನು ಒತ್ತುವರಿ ಮಾಡುತ್ತಿದ್ದರು. ಹೀಗಾಗಿ ಕಾಡಿನ ಪ್ರಾಣಿಗಳು ಆಹಾರಕ್ಕಾಗಿ ನಾಡಿನ ಕಡೆಗೆ ಬರುತ್ತಿವೆ. ಅಂತೆಯೇ ಒಂದು ಸಾರಿ 7-8 ಆನೆಗಳ ಹಿಂಡೊಂದು ಪುರ ಪ್ರವೇಶ ಮಾಡಿತು. ಸುಳಿವು ಸಿಕ್ಕಿದ ಕೂಡಲೇ ಪೋಲೀಸ್, ಅರಣ್ಯ ಸಿಬ್ಬಂದಿ, ಪ್ರಾಣಿ ಪ್ರಿಯರು ಎಲ್ಲರೂ ಒಟ್ಟಾಗಿ ಕಾರ್ಯಾಚರಣೆ ನಡೆಸಿ ಆನೆಗಳನ್ನು ಸುರಕ್ಷಿತವಾಗಿ ಕಾಡಿಗೆ ಕಳಿಸುವಲ್ಲಿ ಯಶಸ್ವಿಯಾದರು. ಆದರೂ ಇಷ್ಟೆಲ್ಲಾ ನೈತಿಕ ಭದ್ರತೆ ಒದಗಿಸಿದ್ದರೂ ಗುಂಪಿನಲ್ಲಿದ್ದ ತುಂಟ ಆನೆಮರಿಯೊಂದು ಯಾರ ಗಮನಕ್ಕೂ ಬರದಂತೆ ಕತ್ತಲಿನಲ್ಲಿ ತಪ್ಪಿಸಿಕೊಂಡು ಆತಂಕ ಹುಟ್ಟಿಸಿತು. ಅಲ್ಲದೆ ತಾನೂ ಹೆದರಿಕೊಂಡು ಪೊದೆಗಳಲ್ಲಿ ಅವಿತುಕೊಂಡು ರಕ್ಷಣೆ ಪಡೆಯುತ್ತಿತ್ತು. ಮತ್ತೆ ಅರಣ್ಯ ಸಿಬ್ಬಂದಿಯವರು ಹುಡುಕಾಡಿದಾಗ ಕೈಗೆ ಸಿಗದಂತೆ ತಪ್ಪಿಸಿಕೊಂಡು 5 -6 ದಿನ ಸತಾಯಿಸಿತು. ಕೊನೆಗೂ ಆನೆಮರಿಯನ್ನು ಹಿಡಿದು ಗುಂಪಿಗೆ ಸೇರಿಸಲು ಪ್ರಯತ್ನಿಸಿದಾಗ ಆದದ್ದು ಏನು ಗೊತ್ತೇ?! ಅದನ್ನು ಟಿ.ವಿ. ನ್ಯೂಸ್ ಚಾನಲ್ ಮತ್ತು ಪತ್ರಿಕೆಯವರು ಪ್ರಸಾರ ಮಾಡಿದ್ದು ಹೀಗೆ. "ನೋಡಿ, ಹಿರಿಯಾನೆಗಳು ಮರಿಯನ್ನು ಗುಂಪಿಗೆ ಸೇರಿಸಿಕೊಳ್ಳದೆ ಹೇಗೆ ಸೊಂಡಿಲಿನಿಂದ ಹೊರಗೆ ತಳ್ಳುತ್ತಿವೆ. ಏಕೆಂದರೆ ಇಷ್ಟು ದಿವಸಗಳ ಕಾಲ ಒಪ್ಪಿಗೆ ಇಲ್ಲದೆ ಸಂಗದಿಂದ ದೂರವಿದ್ದು ಅನ್ಯ ಚಟುವಟಿಕೆಗಳಲ್ಲಿ ತೊಡಗಿದ್ದರಿಂದ ಅವಕ್ಕೆ ಸಿಟ್ಟು ಬಂದಿದೆ. ಆದ್ದರಿಂದ ದೂರ ತಳ್ಳುತ್ತಿವೆ." ಎಂದು. ಅಂದರೆ ಆನೆಗಳಿಗೂ ಸಾಮಾಜಿಕ ಪ್ರಜ್ಞೆ ಇದೆ ಎಂದಾಯಿತು. ಅಲ್ಲವೆ?

ಇದನ್ನೇ ಗುರುಬಸವಣ್ಣನವರು ತಮ್ಮ ಅನುಯಾಯಿಗಳಿಗೆ ಹೇಳುತ್ತಿರುವುದು.

ಶ್ರೀ ವಿಭೂತಿಯ ಪೂಸದವರ ಶ್ರೀ ರುದ್ರಾಕ್ಷಿಯ ಧರಿಸದವರ

ನಿತ್ಯ ಲಿಂಗಾರ್ಚನೆಯ ಮಾಡದವರ
ಜಂಗಮವೇ ಲಿಂಗವೆಂದರಿಯದವರ
ಸದ್ಭಕ್ತರ ಸಂಗದಲ್ಲಿ ಇರದವರ ಎನಗೊಮ್ಮೆ ತೋರದಿರಯ್ಯಾ.
ಲಿಂಗದೇವಾ ಸೆರಗೊಡ್ಡಿ ಬೇಡುವೆನು.

ಲಿಂಗಾಯತರೇ, ನೀವು ಎಲ್ಲಿಯವರೆಗೆ ಧರ್ಮಗುರು ಬಸವಣ್ಣ, ಧರ್ಮ ಸಂಹಿತೆ-ವಚನ ಸಾಹಿತ್ಯ ಎಂದು ದೃಢವಾಗಿ ನಂಬಿ ಅನುಷ್ಠಾನಕ್ಕೆ ತರುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ಅಸ್ತಿತ್ವಕ್ಕೆ ಬೆಲೆಯಿಲ್ಲ. ಮಲಗಿದರೆ ಕುಂಭಕರ್ಣ; ಎದ್ದರೆ ವೀರಭದ್ರ ಎಂಬ ತಾತ್ಕಾಲಿಕ ಕಲಿತನದಿಂದ ಪ್ರಯೋಜನವಿಲ್ಲ. ನಿಮ್ಮ ಶೂರತ್ವ ನಾಯಿ ಬಾಲ ಡೊಂಕಿನಂತೆ ಆಗಬಾರದು ಎಂದಿದ್ದರೆ ನಿರಂತರವಾದ ಬಸವ ಭಕ್ತಿಯನ್ನು ಮೈಗೂಡಿಸಿಕೊಳ್ಳಿರಿ. ಎದ್ದೇಳಿ ಜಾಗ್ರತರಾಗಿ ಈ ಲೇಖನಿಯೊಂದಿಗೆ ನಿಮ್ಮ ಧ್ವನಿಯನ್ನು ಜೋಡಿಸಿರಿ.

" ಬಸವ ತೇಜೋ ಬಲಂ ಬಲಂ
ಬಸವ ತೇಜೋ ಬಲಂ ಬಲಂ "

ಶರಣ ಮೇಳ ಯುಗದ ಅದ್ಭುತ

ವಿಶ್ವಗುರು ಮಂತ್ರ ಪುರುಷ ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪವೆಂಬ ಅಧ್ಯಾತ್ಮಿಕ ಸಂಸ್ಥೆಯನ್ನು ಸ್ಥಾಪಿಸಿದ ಕ್ರಾಂತಿಯೋಗಿಗಳು. ಶ್ರೇಷ್ಠ ಸಮಾಜ ಸುಧಾರಕರೂ ಆಗಿರುವ ಶ್ರೀಗುರು ಬಸವಣ್ಣನವರ ಕಾರ್ಯ-ಸಾಧನೆಗಳ ಬಗೆ ಬಣ್ಣಿಸಲಸದಳ. ಅವರು ಸ್ಥಾಪಿಸಿದ ಅನುಭವ ಮಂಟಪವು ವಿಶ್ವದ ಪ್ರಪ್ರಥಮ ಲೋಕಸಭೆ(Spiritual Parliment) ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 770 ಜನ ಮುಕ್ತಾತ್ಮರನ್ನು ತಯಾರುಮಾಡಿದ್ದು, ಲಕ್ಷದ ಮೇಲೆ ತೊಂಬತ್ತಾರು ಸಾವಿರ ಅನುಯಾಯಿಗಳನ್ನು ಹೊಂದಿದ್ದು, 12 ಸಾವಿರ ಪಣ್ಯಾಂಗನೆಯರನ್ನು ಪುಣ್ಯಾಂಗನೆಯರನ್ನಾಗಿ ಮಾಡಿದ್ದು, ಹೀಗೆ ಹತು ಹಲವು ಕ್ಷೇತ್ರಗಳಲ್ಲಿ ಅವರು ಕ್ರಾಂತಿಗೈದರು. ಕಾಯಕ(Theory of Production) ದಾಸೋಹ(Theory of Distribution) ಈ ತತ್ವವನ್ನು ಇಂದು ವಿಶ್ವಸಂಸ್ಥೆಯು ಅಳವಡಿಸಿಕೊಂಡು ಎಲ್ಲಾ ರಾಷ್ಟ್ರಗಳೂ ಈ ತತ್ವಗಳ ಪಾಲನೆ ಮಾಡುವಂತೆ ಕಡ್ಡಾಯಗೊಳಿಸಿದ್ದೇಯಾದರೆ ವಿಶ್ವದ ಯಾವ ಮೂಲೆಯಲ್ಲೂ ಬಡತನ, ಹಸಿವು ಮತ್ತು ನೋವು ಕಾಣಸಿಗುವುದಿಲ್ಲ. ಅನಕ್ಷರತೆ ದಾರಿದ್ರ್ಯವೆಂಬುದು ಹೇಳ ಹೆಸರಿಲ್ಲದೆ ಮಾಡಬೇಕಾದರೆ ಅನುಭವ ಮಂಟಪದ ಪರಿಕಲ್ಪನೆಯನ್ನು ಎಲ್ಲಾ ರಾಷ್ಟ್ರಗಳೂ ಅರಿಯಬೇಕು. ಕುಷ್ಟರೋಗ ಏಡ್ಸ್, ಪೋಲಿಯೋ ಮುಂತಾದ ರೋಗಗಳನ್ನು ನಿರ್ಮೂಲನ ಮಾಡುವುದಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆಯು ಅಹರ್ನಿಶವಾಗಿ ಶ್ರಮಿಸುತ್ತಿದೆ. ಎಲ್ಲಾ ಸದಸ್ಯ ರಾಷ್ಟ್ರಗಳ ಬೆಂಬಲ ಅದಕ್ಕಿದೆ. ಈ ಎಲ್ಲಾ ರೋಗಗಳಿಗಿಂತ ಬಡತನ, ಅನಕ್ಷರತೆ, ಮೂಢನಂಬಿಕೆ ಮತ್ತು ದೇವರು ಧರ್ಮಗಳ ಹೆಸರಿನಲ್ಲಿ ನಡೆಯುತ್ತಿರುವ ಭಯೋತ್ಪಾದನೆ ಇಂದಿನ ಜಾಗತಿಕ ಸಮಸ್ಯೆಯಾಗಿವೆ. ಈ ಎಲ್ಲಾ ಸಾಮಾಜಿಕ ಪಿಡುಗುಗಳಿಗೆ ಬಸವಾದಿ ಶರಣರು ನೀಡಿರುವ ವಚನ ಸಾಹಿತ್ಯದಲ್ಲಿ ಪರಿಹಾರವಿದೆ. ಈ ಜಾಗತಿಕ ರೋಗಗಳಿಗೆ ವಚನ ವಾಙ್ಮಯ ದಿವ್ಯ ಔಷಧವಾಗಿದೆ . ಅದನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡುವ ಅಗತ್ಯವಿದೆ . ಆದರೆ ಅದರ ವಾರಸುದಾರರು ಅಂದರೆ ಬಹುತೇಕ ಮಠಾಧೀಶರು ದ್ರಾಕ್ಷ ನುಂಗಿದ ಬೆಕ್ಕಿನಂತೆ ಬೆಪ್ಪಾಗಿ ಕುಳಿತ್ತಿದ್ದಾರೆ. ಇಂಥ ನಿರಭಿಮಾನದ ಮರುಭೂಮಿಯಲ್ಲಿಯೂ ಬಸವ ಧರ್ಮ ಪೀಠವೆಂಬ ಸಂಸ್ಥೆ ಅಥವಾ ಪೀಠಾಧೀಶರಾದ ಮಾತಾಜಿಯವರೆಂಬ ಓಯಸ್ಸಿಸ್ ಇದೆಯಲ್ಲ ಎಂದು ನಾವೆಲ್ಲ ಅಭಿಮಾನ ಪಡಬೇಕಾಗಿದೆ.

ಕರ್ನಾಟಕದಲ್ಲಿ ಸಾವಿರಾರು ಮಠಗಳು ನೂರಾರು ಧಾರ್ಮಿಕ ಸಂಘಟನೆಗಳು, ಸರಕಾರದ ಕೃಪಾ ಪೋಷಿತ ಸಂಸ್ಥೆಗಳಿವೆ. ಆದರೆ ಗುರು ಬಸವಣ್ಣನವರ ತತ್ವಗಳನ್ನು ಸರಿಯಾಗಿ ಅರ್ಥೈಸಿಕೊಂಡು ಜಗತ್ತಿಗೆ ತಿಳಿಸುವ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡುತ್ತಿಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು. ಸುಮಾರು ನಾಲ್ಕು ಕೋಟಿ ಅನುಯಾಯಿಗಳಿರುವ ಒಂದು ಧರ್ಮದ ಅನುಯಾಯಿಗಳಿಗೆ ಎಂಟು ನೂರು ವರ್ಷಗಳ ಕಾಲ ತನ್ನ ಧಾರ್ಮಿಕ ಸಂಹಿತೆ ಯಾವುದು ಎಂಬ ಪ್ರಜ್ಞೆ ಇರಲಿಲ್ಲವೆಂದರೆ ಇದಕ್ಕಿಂತ ಹೊಣೆಗೇಡಿತನ ಇನ್ನಾವುದು ಹೇಳಿ?

1987ರಲ್ಲಿ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿ ಮತ್ತು ಮಾತಾಜಿಯವರು ಬಸವ ಧರ್ಮ ಪೀಠ ಟ್ರಸ್ಟನ್ನು ಕೂಡಲ ಸಂಗಮದಲ್ಲಿ ಸ್ಥಾಪಿಸಿ ಇದು ನಮ್ಮ ಧರ್ಮ ಕ್ಷೇತ್ರ ಎಂದು ಘೋಷಿಸಿದರು. ಕುಗ್ರಾಮವಾಗಿದ್ದ ಕೂಡಲ ಸಂಗಮವನ್ನು ಇಂದು ಅಂತರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿರುವುದರ ಹಿಂದೆ ಪೂಜ್ಯ ಗುರುದ್ವಯರ ತ್ಯಾಗ ಮತ್ತು ಪರಿಶ್ರಮವಿದೆ. ಇಂದು ಗುರು ಬಸವಣ್ಣನವರ ಲಕಾಂತರ

ಅನುಯಾಯಿಗಳ ದೃಷ್ಟಿ ಕೂಡಲ ಸಂಗಮತ್ತ ಹರಿಯುವಂತೆ ಮಾಡಿರುವುದು ಪೂಜ್ಯ ಶ್ರೀ ಮಾತಾಜಿಯವರು ಆರಂಭಿಸಿರುವ ಈ ಶತಮಾನದ ಅದ್ಭುತವೇ ಆಗಿರುವ ಕೂಡಲ ಸಂಗಮದ ಶರಣ ಮೇಳ.

1987ಕ್ಕೂ ಪೂರ್ವದಲ್ಲಿ ಪೂಜ್ಯ ಅಪ್ಪಾಜಿ ಹಾಗು ಪೂಜ್ಯ ಮಾತಾಜಿಯವರು ನಾಡಿನ ಉದ್ದಗಲಕ್ಕೂ ತಮ್ಮ ಅಮೋಘವಾಣಿಯಿಂದ ಗುರು ಬಸವಣ್ಣನವರ ತತ್ವಗಳನ್ನು ಪ್ರಚಾರ ಮಾಡುತ್ತ ಜನಜಾಗೃತಿ ಮಾಡುತ್ತಿದ್ದರು. ಪೂಜ್ಯ ಮಾತಾಜಿಯವರು ಅಮೇರಿಕಾಕ್ಕೆ ಹೋದಾಗ ಒಂದು ಕಾರ್ಯಕ್ರಮದಲ್ಲಿ ಪ್ರವಚನ ಮುಗಿದ ನಂತರ ಭಾರತ ಮೂಲದ ಬಸವ ಭಕ್ತರೊಬ್ಬರು ಎದ್ದು ನಿಂತು "ಪೂಜ್ಯರೇ, ಇಸ್ಲಾಂ ಧರ್ಮದ ಅನುಯಾಯಿಗಳು ವರ್ಷಕ್ಕೊಮ್ಮೆ ಮೆಕ್ಕಾಕ್ಕೆ ಹೋಗುತ್ತಾರೆ. ಕ್ರೈಸ್ತ ಬಾಂಧವರು ಅಮೃತಸರದ ಸುವರ್ಣ ಮಂದಿರಕ್ಕೆ ಹೋಗುತ್ತಾರೆ. ಆದರೆ ಲಿಂಗಾಯತರಾದ ನಾವು ಯಾವ ಕ್ಷೇತ್ರಕ್ಕೆ ಹೋಗಬೇಕು?" ಎಂದು ಪ್ರಶ್ನಿಸಿದರಂತೆ! ಆಗ ಪೂಜ್ಯ ಮಾತಾಜಿಯವರು ಆಗಲಿ ನಾವು ಸಹ ನಮ್ಮ ಧರ್ಮ ಕ್ಷೇತ್ರ ಗುರುತಿಸಿ ಆ ವ್ಯವಸ್ಥೆ ಮಾಡೋಣವೆಂದು ಹೇಳಿದರಂತೆ.

ಭಾರತಕ್ಕೆ ಮರಳಿದ ಕೂಡಲೇ ಪೂಜ್ಯ ಮಾತಾಜಿಯವರು, ಪೂಜ್ಯ ಅಪ್ಪಾಜಿಯವರು ಮತ್ತು ಪೂಜ್ಯ ಗಂಗಾಮಾತಾಜಿಯವರೊಂದಿಗೆ ಕೂಡಲ ಸಂಗಮಕ್ಕೆ ತೆರಳಿದರು. ಅಲ್ಲಿಯ ಪರಿಸ್ಥಿತಿ ಗಂಭೀರವಾಗಿತ್ತು. ಐಕ್ಯ ಮಂಟಪ, ಸಂಗಮೇಶ್ವರ ದೇವಸ್ಥಾನ ಬಿಟ್ಟರೆ ಬೇರೇನೂ ಇರಲಿಲ್ಲ. ದೇವಸ್ಥಾನದ ಬಳಿ ಪೂಜಾರಿಗಳು ಎಮ್ಮೆ ಹಸುಗಳನ್ನು ಕಟ್ಟಿ ಕೊಳಕು ಮಾಡಿದ್ದರು. ಹೆಜ್ಜೆ ಹೆಜ್ಜೆಗೂ ಜಾಲಿ ಮುಳ್ಳುಗಳನ್ನು ನೋಡಿ ಪೂಜ್ಯ ಮಾತಾಜಿಯವರು ಕಣ್ಣೀರಿಟ್ಟಿದ್ದರಂತೆ. ಮಹಾಪ್ರವಾದಿಯಾಗಿರುವ, ಕೋಟಿ ಕೋಟಿ ಅನುಯಾಯಿಗಳನ್ನು ಹೊಂದಿರುವ ವಿಶ್ವಗುರು ಬಸವಣ್ಣನವರ ಸಮಾಧಿ ಕ್ಷೇತ್ರ ಈ ದುಃಸ್ಥಿತಿಯಲ್ಲಿ ಇದೆಯಲ್ಲ ಎಂದು ನೊಂದುಕೊಂಡು ಮನದಲ್ಲಿ ಸಂಕಲ್ಪತೊಟ್ಟು ಕೆಲವೇ ದಿನಗಳಲ್ಲಿ 3 ಎಕರೆ ಜಮೀನು ಖರೀದಿಸಿ ಆಶ್ರಮ ನಿರ್ಮಿಸಿದರು. ಧರ್ಮಕ್ಷೇತ್ರವೆಂದು ಘೋಷಿಸಿ ಇಲ್ಲಿ ಬಸವ ಭಕ್ತರೆಲ್ಲ ವರ್ಷಕ್ಕೊಮ್ಮೆಯಾದರೂ ಸೇರಿ ಸಮುದಾಯ ಪ್ರಾರ್ಥನೆ, ಧರ್ಮಗುರುವಿನ ಸ್ಮರಣೆ, ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡುವಂತಾಗಬೇಕು 1988ರ ಜನವರಿ 12,13,14ರಂದು ಪ್ರಥಮ ಶರಣಮೇಳ ನಡೆಸುವುದಾಗಿ ಘೋಷಿಸಿ ಎಲ್ಲೆಡೆ ಪ್ರಚಾರ ಮಾಡಿದಾಗ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಿಂದ ಸುಮಾರು 3 ಲಕ್ಷ ಜನ ಆಗಮಿಸಿದ್ದು ಐತಿಹಾಸಿಕ ದಾಖಲೆ. ಈ ಮುಂಚೆ ಯಾರಾದರೂ ಲಿಂಗೈಕ್ಯರಾದಾಗ ಅಥವಾ ಮದುವೆ ಮನೆಗಳಲ್ಲಿ ಮಾತ್ರ ಒಂದೆಡೆ ಸೇರುತ್ತಿದ್ದ ಲಿಂಗಾಯತರಿಗೆ ಇದೊಂದು ಅದ್ಭುತ ಅನುಭವ. ನೂರಾರು ಜನ ಮಠಾಧೀಶರು ಸಹ ಬಂದು ಪೂಜ್ಯ ಮಾತಾಜಿಯವರ ದೈವೀ ಶಕ್ತಿಯ ಕುರಿತು ಮುಕ್ತ ಕಂಠದಿಂದ ಕೊಂಡಾಡಿದರು. ಸಂಪ್ರದಾಯವಾದಿಗಳ ಅಡೆ ತಡೆಗಳ ಮಧ್ಯೆಯೇ ವರ್ಷದಿಂದ ವರ್ಷಕ್ಕೆ ಬೆಳೆಯುತ್ತಲೇ ಇದೆ ನಮ್ಮ ಶರಣ ಮೇಳ.

ಆರನೆಯ ಶರಣ ಮೇಳದಲ್ಲಿ ಸ್ವಾಮೀಜಿಯವರೊಬ್ಬರು "ಪೂಜ್ಯ ಮಾತಾಜಿಯವರು ಸ್ವತಂತ್ರ ಹುಲಿಯಾಗಿದ್ದಾರೆ. ನಾವೆಲ್ಲ ಪಂಜರದ ಹುಲಿಗಳು. ನಾವು ಭಕ್ತರು ಹೇಳಿದಂತೆ ಕೇಳುವವರು, ಭಕ್ತರ ಅಧೀನದಲ್ಲಿರುವವರು ಆದರೆ ಪೂಜ್ಯ ಮಾತಾಜಿಯವರು ಯಾರಿಗೂ ಹೆದರದೇ ತತ್ವ ಪ್ರತಿಪಾದನೆ ಮಾಡುತ್ತಾರೆ. ಶರಣ ಮೇಳ ಒಂದು ಸೂಪರ್ ಫಾಸ್ಟ್ ಟ್ರೈನ್ ಇದ್ದಂತೆ ಯಾರು ಇದರಲ್ಲಿ ಹತ್ತುವರೋ ಅವರು ದೈವತ್ವದ ಗುರಿ ಮುಟ್ಟುವರು. ಕೆಳಗಿಳಿದವರನ್ನು ದುರ್ದೈವಿಗಳೆಂದೇ ಹೇಳಬೇಕು." ಎಂದು ನುಡಿದದ್ದು ನನಗೀಗಲೂ ನೆನಪಿದೆ.

ನಿಜವಾಗಿಯೂ ಲಕ್ಷಾಂತರ ಬಸವ ಭಕ್ತರು ಜಾತಿ-ಮತ-ಪಂಥಗಳ ಭೇದ ಭಾವ ಮರೆತು ಶಿಸ್ತಿನಿಂದ ಭಾಗವಹಿಸುವ ಈ ಅಂತರಾಷ್ಟ್ರೀಯ ಸಮಾವೇಶವು ಈ ಶತಮಾನದ ಅಧ್ಬುತವೇ ಸರಿ. ಕರ್ನಾಟಕ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳ ಗೋವಾ ಮತ್ತು ದೆಹಲಿಯಿಂದಲೂ ಸಹ ಲಕ್ಷ ಲಕ್ಷ ಸಂಖ್ಯೆಯಲ್ಲಿ ಶರಣರ ಆಗಮನವಾಗಲಿದೆ. ಗುರು ಬಸವಾದಿ ಶರಣರ ಸಂಕಲ್ಪದಂತೆ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ ಜನವರಿ 11ರಿಂದ 15ರ ವರೆಗೆ 22ನೆಯ ಶರಣ ಮೇಳ ನಡೆಯಲಿದೆ ಬಸವ ಭಕ್ತರು ತನು ಮನ ಧನಗಳಿಂದ ಸೇವೆ ಮಾಡುವುದರ ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಬೇಕೆಂದು ನನ್ನ ಬಿನ್ನಹ.

-ಪೂಜ್ಯ ಶ್ರೀ ಚೆನ್ನಬಸವಾನಂದ ಸ್ವಾಮೀಜಿ
ಬಸವ ಮಂಟಪ ನವದೆಹಲಿ

ಶ್ರೇಷ್ಠ ಧರ್ಮ ಬೇಕೋ ? ಅಥವಾ ದೊಡ್ಡ ಧರ್ಮ ಬೇಕೊ?

-ಪ್ರತಿಕ್ರಿಯೆ

ಡಿಸೆಂಬರ್ 2008ರ ತಮ್ಮ ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗಿರುವ ನನ್ನ "ಜಗದ್ಗುರು ಮಾತೆ ಮಹಾದೇವಿಯವರಲ್ಲಿ ಒಂದು ಬಿನ್ನಹ" ಎಂಬ ಲೇಖನಕ್ಕೆ ಅದೇ ಕಲ್ಯಾಣ ಕಿರಣದಲ್ಲಿ ಸಂಪಾದಕೀಯ -2 "ಲಿಂಗಾಯತ ಧರ್ಮ ಮತ್ತು ಆಹಾರ ಪದ್ಧತಿ" ಎಂಬ ತಮ್ಮ ಲೇಖನದಲ್ಲಿ ಒಂದು ಶ್ರೇಷ್ಠ ಧರ್ಮ ಬೇಕೋ? ಅಥವಾ ದೊಡ್ಡ ಧರ್ಮ ಬೇಕೊ? ಎಂಬ ದ್ವಂದ್ವ ಪ್ರಶ್ನೆಯನ್ನು ತಾವು ಶ್ರೇಷ್ಠ ಮಟ್ಟದ ಲಿಂಗಾಯತ ಮಹಿಳಾ ಜಗದ್ಗುರುಗಳಾಗಿ ಸಮರ್ಥ ರೀತಿಯಲ್ಲಿ ವಿವರಿಸಿದ್ದೀರಿ. ತಮ್ಮ ವಿವರಣೆಯು ನನಗೆ ಪೂರ್ಣ ಸಮಾಧಾನವನ್ನುಂಟು ಮಾಡಿದೆ. ತಾವು ಈ ಆಧುನಿಕ ಸಮಾಜದ ಎಲ್ಲಾ ಕುಲ, ಜಾತಿ, ಮತ, ಧರ್ಮೀಯರ ನರನಾಡಿಗಳನ್ನು ಹಿಡಿದು ಪರೀಕ್ಷಿಸಿ ಅಮೋಘ ಅನುಭವವನ್ನು ಪಡೆದು ಪಾಂಡಿತ್ಯವನ್ನು ಗಳಿಸಿದ್ದೀರಿ. ತಮ್ಮ ಅನುಭವ ಮತ್ತು ಅನಿಸಿಕೆಗಳನ್ನು ನೇರ ನುಡಿಗಳಿಂದ ಮಾಸಿಕ ಕಲ್ಯಾಣ ಕಿರಣದ ಸಂಪಾದಕೀಯಗಳಿಂದ ಸಮಾಜದ ಓರೆಕೋರೆಗಳನ್ನು ತಿದ್ದಲು ನಿರಂತರವಾಗಿ ಶ್ರಮಿಸುತ್ತಿದ್ದೀರಿ. ಆದರೆ ಈ ಸಸ್ಯಾಹಾರ ಧರ್ಮದ ಮಂದಿಯಾಗಲೀ, ಮಾಂಸಾಹಾರಿ ಧರ್ಮದ ಮಂದಿಯಾಗಲಿ, ತಾವು ಸರಳವಾಗಿ ಉಪದೇಶಿಸುತ್ತಿರುವ ಬಸವ ತತ್ವಾಮೃತವನ್ನು ಸವಿಯುವ ಮತ್ತು ಅದರಂತೆ ಕೊಂಚವಾದರೂ ನಡೆದುಕೊಳ್ಳುವತ್ತ ಶ್ರದ್ಧಾಹೀನರಾಗುತ್ತಿರುವುದೇ ಒಂದು ವಿಷಾದನೀಯ ಸಂಗತಿ.

ಸಮಾಜದ ವಿದ್ಯಾವಂತ ಮಂದಿ ಎಷ್ಟು ಮೌಢ್ಯರೆಂಬುದಕ್ಕೆ ಒಂದು ಸರಳವಾದ ಉದಾಹರಣೆಯನ್ನು ಕೊಡಲು ಇಚ್ಛಿಸುತ್ತೇನೆ. ತಾವು ಹತ್ತು ಹನ್ನೆರಡು ವರ್ಷಗಳ ಹಿಂದೆ ಬಸವಣ್ಣನವರ ವಚನಗಳ ಕೊನೆಯಲ್ಲಿ ಬರುವ "ಕೂಡಲ ಸಂಗಮದೇವ" ಎಂಬ ಒಂದು ಸೀಮಿತ ಸ್ಥಳದ ದೇವರ ನಾಮಾಂಕಿತವನ್ನು ನಿಸ್ಸೀಮಿತ ಅಖಂಡತ್ವವನ್ನು ಸೂಚಿಸುವ "ಲಿಂಗದೇವಾ" ಎಂಬ ನಾಮಾಂಕಿತದ ಬದಲಾವಣೆಯನ್ನು ಮಾಡಿದಕ್ಕೆ ಅದರ ಸರಳ ಅರ್ಥವನ್ನು ಗ್ರಹಿಸದ, ಗ್ರಹಿಸಿಯೂ ಸಹಿಸದ ಅಸೂಯೆಯ ಕೆಲವು ಮಂದಿ ಅದರ ವಿರುದ್ಧ ಒಂದು ರಾದ್ಧಾಂತವನ್ನೇ ಮಾಡಿ ನ್ಯಾಯಲಯಕ್ಕೂ ಹೋಗಿ ಬದಲಾವಣೆಗೆ ಅಡ್ಡಿಯುಂಟು ಮಾಡಿದರು. ನ್ಯಾಯಾಲಯಕ್ಕೆ "ತತ್ವ" ಬೇಕಾಗಿರಲಿಲ್ಲ. "ಮಕ್ಕಿಕಾ ಮಕ್ಕಿ ಬೇಕಾಗಿತ್ತು." ಸಾಮಾನ್ಯ ಮಂದಿ ಮಾತ್ರ ಅದರಲ್ಲೂ ಹೆಚ್ಚಿನ ಮೌಢ್ಯರು ನ್ಯಾಯಾಲಯವು ಎತ್ತಿ ಹಿಡಿದ "ಕೂಡಲಸಂಗಮ ದೇವಕ್ಕೇ ಜೈ" ಅಂದರು. ಬುದ್ಧಿವಂತ ಮಂದಿ ಜಗದ್ಗುರು ಮಾತೆ ಮಹಾದೇವಿಯವರು ಸೂಚಿಸಿ ಬದಲಾಯಿಸಿದ "ಲಿಂಗದೇವಕ್ಕೆ ಜೈ" ಅಂದರು. ಹೀಗಿದೆ ದೊಡ್ಡ ಧರ್ಮ ಮತ್ತು ಶ್ರೇಷ್ಠ ಧರ್ಮದ ವ್ಯತ್ಯಾಸ.

ಒಂದು ಪಕ್ಷ ಈಗಿನ ಸ್ಥಿತಿಯಲ್ಲಿ ತಾವು ಮಾಂಸಾಹಾರಿಗಳಿಗೆಲ್ಲಾ ಲಿಂಗದೀಕ್ಷೆ ಕೊಡುತ್ತೇನೆಂದು ರತ್ನಗಂಬಳಿ ಹಾಸಿ ಆಹ್ವಾನಿಸಿದರೂ ಅವರು ಬಂದು ದೀಕ್ಷೆ ಸ್ವೀಕರಿಸುವುದಂತೂ ದುರ್ಲಭವೆ. ಏಕೆಂದರೆ, ಇತ್ತೀಚಿನ ಶೂದ್ರ ಜನಾಂಗದ ನಾನಾ ಜಾತಿ ವರ್ಗದವರೂ ಅವರವರ ಜಾತಿಗೊಬ್ಬರಂತೆ ಅವರಿಗನುಕೂಲವಾದ ಜಾತಿ ಗುರುಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಇನ್ನುಳಿದ ಪಂಚಮದವರು, ದೀನ ದಲಿತರು ಆಮಿಷಗಳಿಗೆ ಬಲಿಬಿದ್ದು ವಿದೇಶೀ ಮತಗಳಿಗೂ ಸ್ವದೇಶೀ ಮತವಾದ ಬೌದ್ಧಮತದತ್ತ ಮುಖ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಹಿಂದೂ ಧರ್ಮಕ್ಕೆ ಅಳಿಗಾಲ ಬಂದಿರುವುದಂತೂ ನಿಜ. ಹಿಂದೂ ಧರ್ಮದ ಅಳಿಗಾಲಕ್ಕೆ ಅದರಲ್ಲಿದ್ದ/ಇರುವ ಮುಖಂಡರ ಮಾನ್ಯತೆಗಳು ಮತ್ತು ಜನ ಸಾಮಾನ್ಯರ ಮೌಢ್ಯವೇ ಮೂಲಕಾರಣ. ಸಧ್ಯಕ್ಕೆ ಅದನ್ನು ಉಳಿಸಿಕೊಳ್ಳುವ ಯಾವ ಮಾರ್ಗವೂ ಗೋಚರವಾಗುತ್ತಿಲ್ಲ. ಯಾವುದೇ ವಿದೇಶೀ ಧರ್ಮಗಳಿಗಿಂತ ನಮ್ಮ ಸ್ವದೇಶೀ ಧರ್ಮಗಳೇ ಕ್ಷೇಮ ಎಂಬ ಅರಿವನ್ನು ಎಚ್ಚರಿಕೆಯನ್ನೂ ತಾವಗಲೇ ತಮ್ಮ "ಕಲ್ಯಾಣ ಕಿರಣ"ದಲ್ಲಿ ಸ್ಪಷ್ಟಪಡಿಸಿರುತ್ತೀರಿ. ಇದನ್ನು ಪ್ರತಿಯೊಬ್ಬ ಭಾರತೀಯ ಧರ್ಮೀಯರೂ ಗ್ರಹಿಸಬೇಕಾದ ವಿಚಾರ.

ಇಷ್ಟಾದರೂ ತಾವು ಬಸವ ಧರ್ಮದ ಜೊತೆಗೆ ಸರ್ವಧರ್ಮೀಯರೂ ಮೆಚ್ಚುವಂತಹ ತಮ್ಮ ಅಮೂಲ್ಯ ಬೋಧನೆಯನ್ನು ಪ್ರವಚನಗಳ ಮೂಲಕವೂ ಕಲ್ಯಾಣ ಕಿರಣಗಳ ಮೂಲಕವೂ ಬಿತ್ತರಿಸುತ್ತಿದ್ದೀರಿ. ಇದಕ್ಕಾಗಿ ತಮಗೆ ನನ್ನ ಹೃತ್ಪೂರ್ವಕ ವಂದನೆಗಳು.

-ಸಿ. ಮುತ್ತುರಾಯಪ್ಪ

ಸ್ಫುರಣ ಕಿರಣಗಳು

-ಸಚ್ಚಿದಾನಂದ ಚಟನಳ್ಳಿ

1 ವಿದ್ಯೆ,ಶಿಕ್ಷಕ,ಪುಸ್ತಕ, ಪೋಷಕ=ದೇವರು,ಗುರು,ಲಿಂಗ,ಜಂಗಮ:

ಶ್ರಾವಣ ಮಾಸದಲ್ಲಿ ವಿಶ್ವಧರ್ಮ ಪ್ರವಚನ ಮಾಡುತ್ತಿದ್ದೆ, ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆಯಾದುದ್ದರಿಂದ ಈ ಬಗ್ಗೆ ಪ್ರವಚನದಲ್ಲಿ ಹೇಳಬೇಕು ಎಂದು ಯೋಚಿಸುತ್ತಿದ್ದೆ. ವಿದ್ಯೆ, ಶಿಕ್ಷಕ, ಪುಸ್ತಕ, ಪೋಷಕ ಇವುಗಳ ಸಂಬಂಧ ಮತ್ತು ಕರ್ತವ್ಯಗಳ ಬಗ್ಗೆ ಹೇಳಬೇಕು ಎಂದು ಚಿಂತನೆ ನಡೆಸಿರುವಾಗಲೇ ಒಂದು ಆಲೋಚನೆ ಹೊಳೆಯಿತು.

ವಿದ್ಯೆಯು ನಿರಾಕಾರವಾದುದು. ಇದನ್ನು ಬೋಧಿಸಲಿಕ್ಕೆ ಬಂದ ಶಿಕ್ಷಕನೇ ವಿದ್ಯೆಯ ಮೊದಲನೆಯ ಸಾಕಾರ ರೂಪ. ಕೇವಲ ಶಿಕ್ಷಕ ಬೋಧಿಸಿದರೆ ಸಾಲದು ಬಾಲಕ (ವಿದ್ಯಾರ್ಥಿ) ನಾದವನು ಕೈಯಲ್ಲಿ ಹಿಡಿದು ಅಧ್ಯಯನ (ಸಾಧನೆ) ಮಾಡುವ ವಸ್ತು ಬೇಕು, ಅದುವೇ ಪುಸ್ತಕ. ನಿರಾಕಾರ ವಿದ್ಯೆಯ ಎರಡನೆಯ ಸಾಕಾರ ರೂಪವೇ ಪುಸ್ತಕ. ಶಿಕ್ಷಕ ಪುಸ್ತಕ ಎರಡೂ ಇದ್ದರೂ ಸಾಲದು. ಬಾಲಕನಿಗೆ ಆತ್ಮೀಯವಾಗಿ ಪ್ರೀತಿಯಿಂದ ತಿದ್ದಿ ತೀಡಿ ಸಲಹೆ ನೀಡುವ ಪೋಷಕ ಅಥವಾ ಮನೆ ಪಾಠದ ಶಿಕ್ಷಕ (Home Tutor) ಕೂಡ ಬೇಕು. ಮನೆ ಪಾಠದ ಶಿಕ್ಷಕ ವಿದ್ಯೆಯ ಮೂರನೆಯ ಸಾಕರ ರೂಪ. ಒಬ್ಬ ವಿದ್ಯಾರ್ಥಿ ನಿರಾಕಾರವಾದ ವಿದ್ಯೆಯನ್ನು ಪರಿಪೂರ್ಣವಾಗಿ ಶಿಕ್ಷಕ, ಪುಸ್ತಕ, ಪೋಷಕ ಇವು ಮೂರು ಸಾಕಾರ ರೂಪಗಳ ಮುಖಾಂತರವೇ ಪಡೆಯಬೇಕು. ಅದೇ ರೀತಿ ಲಿಂಗದೇವನು ನಿರಾಕಾರ. ನಿರಾಕಾರನಾದ ಪರಮಾತ್ಮನನ್ನು ತಿಳಿಸಿಕೊಡಲು ಬಂದ ಮೊದಲ ಸಾಕಾರ ರೂಪವೇ ಗುರು - ಗುರು ಬಸವಣ್ಣನವರು. ಭಕ್ತನು ಗುರುವಿನಿಂದ ಅನುಗ್ರಹ ಹೊಂದಿದ ಮಾತ್ರಕ್ಕೆ ಅವನಿಗೆ ಪರಮಾತ್ಮನ ದರ್ಶನವಾಗಲಾರದು. ತಾನು ಕರಸ್ಥಲದಲ್ಲಿ ಇಟ್ಟುಕೊಂಡು ಸಾಧನೆ ಮಾಡುವ ವಸ್ತುವೊಂದು ಬೇಕು ಎಂದು ತಿಳಿದು ಗುರುಬಸವಣ್ಣನವರು ಇಷ್ಟಲಿಂಗವನ್ನು ಕರುಣಿಸಿದರು. ಇಷ್ಟಲಿಂಗ ನಿರಾಕಾರ ದೇವನ ಎರಡನೆಯ ಸಾಕಾರ ರೂಪ. ಕೇವಲ ಗುರು ಮತ್ತು ಲಿಂಗ ಎರಡರ ಆರಾಧನೆ ಮಾಡಿದರೆ ಸಾಲದು, ಭಕ್ತರನ್ನು ಆತ್ಮೀಯವಾಗಿ ತಿದ್ದಿ ತೀಡಿ ಸಲಹೆ ಸೂಚನೆ ನೀಡುವ ವ್ಯಕ್ತಿಯೂ ಬೇಕು, ಅವರೇ ಜಂಗಮ. ಹೀಗೆ ಜಂಗಮನು ನಿರಾಕಾರ ದೇವನ ಮೂರನೆಯ ಸಾಕಾರ ರೂಪ. ಅಲ್ಲಿ ವಿದ್ಯಾರ್ಥಿಯಾದವನು ಶಿಕ್ಷಕ ಇದ್ದೆಡೆಗೆ ಹೋಗಬೇಕು. ಹಾಗೆಯೇ ಅಂದು ಗುರುಬಸವಣ್ಣನವರಿದ್ದೆಡೆಗೆ ಜನ ಸಮೂಹ ಹರಿದು ಬಂತು. ಮನೆ ಪಾಠದ ಶಿಕ್ಷಕ ವಿದ್ಯಾರ್ಥಿ ಇದ್ದೆಡೆಗೆ ಬರುತ್ತಾನೆ. ಹಾಗೆಯೇ ಜಂಗಮನು (ಲಿಂಗಾನಂದ ಸ್ವಾಮೀಜಿ) ಭಕ್ತರನ್ನು ಹುಡುಕಿಕೊಂಡು ಹೋಗಿ ಅವರಿಗೆ ಆತ್ಮೀಯವಾದ ಸಲಹೆ ಸೂಚನೆಗಳನ್ನು ನೀಡಿ ಅವರು ಎಡವಿದಾಗ ಅವರನ್ನು ತಿದ್ದಿ ತೀಡಿ ಮಾರ್ಗದರ್ಶನ ನೀಡುತ್ತಾರೆ. ಮಾತಾಜಿ, ಗಂಗಾ ಮಾತಾಜಿ, ಹಾಗು ಬಸವ ಧರ್ಮ ಪೀಠದ ಇತರ ತ್ಯಾಗಿಗಳು ನಿಜವಾದ ಜಂಗಮರು. ನಿರಂತರವಾಗಿ ಹರಿಯುವ ನದಿಯಂತೆ ಸಂಚರಿಸುತ್ತ ಭಕ್ತರಿಗೆ ನಿಜ ಬಸವ ತತ್ವವನ್ನು ತಿಳಿಯಪಡಿಸುತ್ತಿದ್ದಾರೆ. ವಿದ್ಯಾರ್ಥಿಯು ಶಿಕ್ಷಕನಿಗೆ ತನು, ಪುಸ್ತಕ್ಕೆ ಮನ, ಮನೆ ಪಾಠದ ಶಿಕ್ಷಕನಿಗೆ ಧನವನ್ನು ಕೊಡುವಂತೆ; ಭಕ್ತನು ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವನ್ನು ಕೊಡಬೇಕು ಆಗ ಮಾತ್ರ ಪರಮಾತ್ಮನ ಪರಿಪೂರ್ಣ ದರ್ಶನವಾಗುತ್ತದೆ. ಈ ಉದಾಹರಣೆಯನ್ನು ಗುರು ಬಸವಣ್ಣನವರ ವಚನ ಎಷ್ಟೊಂದು ಸ್ಪಷ್ಟೀಕರಿಸುತ್ತದೆ ನೋಡಿ !

ನಿತ್ಯ ನಿರಂಜನ ಪರಂಜ್ಯೋತಿ ವಸ್ತು ಉಪದೇಶವ ಕೊಟ್ಟು ಗುರುವಾದ
ಕರಸ್ಥಲಕ್ಕೆ ಬಂದು ಲಿಂಗವಾದ, ಹಸರವಾದ ಪ್ರಪಂಚವನಳಿದು
ದಾಸೋಹವ ಮಾಡಿಸಿಕೊಂಡು ಜಂಗಮವಾದ. ಇಂತೀ ಗುರು ಲಿಂಗ ಜಂಗಮ
ಒಂದೆಯಲ್ಲದೆ ಭಿನ್ನವಿಲ್ಲ. ಈ ಮೂರಕ್ಕೆ ಮೂರನಿತ್ತು ಮೂರನೊಂದು ಮಾಡಬಲ್ಲಡೆ
ಆತ ಪ್ರಸಾದಿ ಕಾಯನಯ್ಯ ಲಿಂಗದೇವಾ.

2. ಸತಿ ಪತಿಗಳೊಂದಾದ ಭಕ್ತಿ.....

ಗುರುಬಸವಣ್ಣನವರ ಕಾಲದಲ್ಲಿ ಸಾಗರೋಪಾದಿಯಲ್ಲಿ ಹರಿದ ವಚನ ಸಾಹಿತ್ಯ ತುಂಬಾ ವೈಶಿಷ್ಟ್ಯಪೂರ್ಣವಾಗಿದೆ. ಸಮಾಜದ ಎಲ್ಲಾ ವಿಭಾಗಗಳಲ್ಲಿಯೂ ಕಾಯಕ ಮಾಡುವ ಶರಣ, ಶರಣೆಯರು ವಚನಗಳನ್ನು ಬರೆದಿದ್ದಾರೆ. ತಾನು ಮಾಡುವ ಕಾಯಕದ ಬಗ್ಗೆ ಹೇಳುತ್ತಲೇ ಒಂದು ತತ್ತ್ವವನ್ನೂ ಹೇಳುವುದು ವಚನ ಸಾಹಿತ್ಯದ ಇನ್ನೊಂದು ವೈಶಿಷ್ಟ್ಯ. ಉದಾಹರಣೆಗೆ:

1. ತಡೆಯಿಲ್ಲದೆ ಮಹಾನದಿಯಲ್ಲಿ ಒಡಲಿಲ್ಲದಂಬಿಗ ಬಂದೈದಾನೆ
   ಹಿಡಿವ ಬಿಡುವ ಮನದ ಬೆಲೆಗೊಟ್ಟೊಡೆ
   ಗಡಣವಿಲ್ಲದೆ ಹಾಯಿಸುವೆ ಹೊಳೆಯ
   ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವೆ
   ನೆಂದನಂಬಿಗರ ಚೌಡಯ್ಯ

   - ಅಂಬಿಗರ ಚೌಡಯ್ಯ

2. ಕೈಯಲ್ಲಿ ಕನ್ನಡಿಯಿರಲು ತನ್ನ ತಾ ನೋಡಬಾರದೆ ?......

   - ಕನ್ನಡಿ ಕಾಯಕದ ರೇಮಮ್ಮ

3. ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ ಅಡಿಯ ಹಲಗೆ ಬ್ರಹ್ಮ....

   - ಕದಿರೆ ರೆಮ್ಮವ್ವೆ

ಇಂಥ ಹಲವಾರು ವಚನಗಳು ವಚನ ಸಾಹಿತ್ಯದಲ್ಲಿ ವಿಪುಲವಾಗಿ ದೊರೆಯುತ್ತವೆ. ಇವುಗಳನ್ನು ಓದುವಾಗ ನನಗೊಂದು ವಿಚಾರ ಸ್ಫುರಿಸಿತು. ನಾನು ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುವುದರಿಂದ ನಾನು ದಿನನಿತ್ಯವೂ ರೈಲ್ವೆ ಎಂಜೀನ್‌ಗಳನ್ನು ನೋಡುತ್ತಿರುತ್ತೇನೆ ಇವುಗಳನ್ನು ನೋಡಿ ಒಂದು ತತ್ವ ಹೇಳಬಹುದಲ್ಲ ಎನಿಸಿತು. ತಾವು ಅನೇಕ ಸಲ ನೋಡಿರಬಹುದು, ಟ್ರೈನ್‌ಗೆ ಕೆಲವೊಮ್ಮೆ ಎರಡು ಎಂಜಿನ್‌ಗಳಿರುತ್ತವೆ. ಇವುಗಳಿಗೆ 'ಮಲ್ಟಿಪಲ್ ಆಪರೇಶನ್'(Multiple Operation) ಎಂದು ಕರೆಯುತ್ತಾರೆ. ಎರಡೂ ಎಂಜಿನ್‌ಗಳ ಚಾಲನೆ ಮತ್ತು ನಿಯಂತ್ರಣ ಮುಂದಿನ ಎಂಜಿನ್‌ನಿಂದಲೇ ನಡೆಯುತ್ತದೆ. ಮುಂದಿನ ಎಂಜಿನ್‌ನಲ್ಲಿ ಎಕ್ಸಲರೇಟರ್ (Accelerator) ಜಾಸ್ತಿ ಮಾಡಿದರೆ, ಹಿಂದಿನ ಎಂಜಿನ್‌ನಲ್ಲೂ ಜಾಸ್ತಿಯಾಗುತ್ತದೆ. ರಸ್ತೆಯ ವಾಹನಗಳಲ್ಲಿ ಇರುವ ಗೇರ್ (Gear) ಗೆ ಸಮನಾಗಿ ರೈಲ್ವೆ ಎಂಜಿನ್‌ನಲ್ಲಿ Transistion Box ಇರುತ್ತದೆ ಇದು ಎಲೆಕ್ಟ್ರಾನಿಕ್ ಗೇರ್ ವ್ಯವಸ್ಥೆ ಒಳಗೊಂಡಿರುತ್ತದೆ. ಹೀಗೆ ಮುಂದಿನ ಎಂಜಿನ್‌ನಲ್ಲಿ ಟ್ರ್ಯಾಂಜಿಷನ್ (ವೇಗ ಪರಿವರ್ತನೆ) ಆದಾಗ ಹಿಂದಿನ ಎಂಜಿನ್‌ನಲ್ಲೂ ವೇಗ ಪರಿವರ್ತನೆಯಾಗುತ್ತದೆ.


ಮುಂದಿನ ಎಂಜಿನ್‌ನಲ್ಲಿ ಬ್ರೇಕ್ ಹಾಕಿದರೆ ಹಿಂದಿನ ಎಂಜಿನ್‌ನಲ್ಲೂ ಬ್ರೇಕ್ ಬೀಳುತ್ತದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಮುಂದಿನ ಎಂಜಿನ್‌ನಲ್ಲಿ ಆಗುವ ಈ ಎಲ್ಲಾ ಕ್ರಿಯೆಗಳು ಹಿಂದಿನ ಎಂಜಿನ್‌ನಲ್ಲಿ ಆಗದೆ ಹೋದರೆ, ಆ ಎಂಜಿನನ್ನು ನಿಷ್ಕ್ರಿಯಗೊಳಿಸಲಾಗುತ್ತದೆ (Dead Engine). ಆಗ ಮುಂದಿನ ಎಂಜಿನ್‌ಗೆ ಇಡೀ ಟ್ರೈನ್‌ನನ್ನು ಎಳೆಯುವ ಭಾರ ಮಾತ್ರವಲ್ಲದೆ ಈ ಡೆಡ್ ಎಂಜಿನ್ ಎಳೆಯುವುದು ಹೆಚ್ಚಿನ ಭಾರ. ಆಗ ವೇಗ ಕಡಿಮೆಯಾಗಿ ಟ್ರೈನ್ ತಡವಾಗಿ ತನ್ನ ಗುರಿ ಮುಟ್ಟುತ್ತದೆ.

ಆದೇ ರೀತಿ ಸಂಸಾರವೆಂಬ ಟ್ರೈನನ್ನು ಪರಮಾತ್ಮನಲ್ಲಿಗೆ ತೆಗೆದುಕೊಂಡು ಹೋಗುವ ಎರಡು ಎಂಜಿನ್‌ಗಳೇ ಪತಿ ಮತ್ತು ಪತ್ನಿ. ಗಂಡನಲ್ಲಿ/ಹೆಂಡತಿಯಲ್ಲಿ ಧರ್ಮ ಮತ್ತು ಆಧ್ಯಾತ್ಮದ ಹಳಿಗಳ ಮೇಲೆ ಸಾಗಲು ಎಕ್ಸ್‌ಲರೇಟರ್ (ಹೃದಯ ಪರಿವರ್ತನೆಯಾದಾಗ) ಕೊಟ್ಟಾಗ ಹೆಂಡತಿ/ಗಂಡನಲ್ಲಿಯೂ ಎಕ್ಸಲರೇಟ್ ಕೊಡಬೇಕು. ಗಂಡ/ಹೆಂಡತಿಯಲ್ಲಿ ಧಾರ್ಮಿಕ ಪರಿವರ್ತನೆ, ಏಕದೇವೋಪಾಸನೆ ಎಂಬ ಟ್ರ್ಯಾಂಜಿಷನ್ (ಪರಿವರ್ತನೆ)ಯಾದಾಗ ಹೆಂಡತಿ/ಗಂಡ ಕೂಡ ಏಕದೇವೋಪಾಸನೆಯ ಪರಿವರ್ತನೆಯಾಗಬೇಕು. ಗಂಡ/ಹೆಂಡತಿಯಲ್ಲಿ ಬಹುದೇವೋಪಾಸನೆ, ಮೂಢನಂಬಿಕೆಗಳಿಗೆ ಬ್ರೇಕ್ ಬಿದ್ದಾಗ ಹೆಂಡತಿ/ಗಂಡನಲ್ಲಿಯೂ ಇವುಗಳಿಗೆ ಬ್ರೇಕ್ ಬೀಳಬೇಕು. ಅಂದಾಗ ಮಾತ್ರ ಸಂಸಾರದ ಟ್ರೈನ್ ಧರ್ಮ ಮತ್ತು ಆಧ್ಯಾತ್ಮದ ಹಳಿಗಳ ಮೇಲೆ ನಡೆಯುತ್ತ ಬೇಗನೆ ಪರಮಾತ್ಮ ಲಿಂಗದೇವ ಎನ್ನುವ ಗುರಿಯನ್ನು ತಲುಪುತ್ತದೆ. ಒಂದು ವೇಳೆ ಈ ಎಲ್ಲಾ ಬದಲಾವಣೆಗಳು ಗಂಡನಲ್ಲಿ ಆದಾಗ ಹೆಂಡತಿಯಲ್ಲಿ ಆಗದಿದ್ದರೆ ಅಥವಾ ಹೆಂಡತಿಯಲ್ಲಿ ಈ ರೀತಿ ಪರಿವರ್ತನೆಗಳಾದಾಗ ಗಂಡನಲ್ಲಿ ಆಗದಿದ್ದರೆ, ಅರ್ಥಾತ್ ಗಂಡ ಶುದ್ಧ ಬಸವ ತತ್ತ್ವದಲ್ಲಿ ನಡೆಯುವ ಸಂಕಲ್ಪ ಮಾಡಿದಾಗ ಹೆಂಡತಿ ಮಾಡದಿದ್ದರೆ, ಅಥವಾ ಹೆಂಡತಿ ಶುದ್ಧ ಬಸವಾನುಯಾಯಿಯಾದಾಗ ಗಂಡ ಇದರ ಅನುಯಾಯಿಯಾಗದಿದ್ದರೆ ಆಗ ಒಂದು ಎಂಜಿನ್ ಡೆಡ್ ಎಂಜಿನ್ ಆಗುತ್ತದೆ. ಆಗ ಧರ್ಮ ಮತ್ತು ಆಧ್ಯಾತ್ಮ ಪಥದಲ್ಲಿ ನಡೆಯುತ್ತಿರುವ ಗಂಡ/ಹೆಂಡತಿ ಎಂಬ ಎಂಜೀನ್‌ಗೆ ಸ್ಪಂದಿಸದೇ ಇರುವ ಹೆಂಡತಿ/ಗಂಡ ಎನ್ನುವ ಎಂಜಿನ್ ಹೆಚ್ಚಿನ ಭಾರವಾಗಿ ಆಧ್ಯಾತ್ಮ ಮಾರ್ಗದಲ್ಲಿ ಸಾಗುತ್ತ ಪರಮಾತ್ಮ ಗುರಿ ಮುಟ್ಟಲು ತಡವಾಗುತ್ತದೆ. ಅದಕ್ಕಾಗಿ ಶರಣ ಬಂಧುಗಳೇ, ಲಿಂಗಾಯತ ಧರ್ಮ ನಿಂತಿರುವುದೇ ಸಂಸಾರ ಯೋಗದ ಮೇಲೆ. ತಾವುಗಳು ಪತಿ-ಪತ್ನಿ ಇಬ್ಬರೂ ಪ್ರಾರ್ಥನೆಗೆ, ಶರಣ ಮೇಳ ಕಲ್ಯಾಣ ಪರ್ವಕ್ಕೆ ಬರಬೇಕು. ಒಬ್ಬರೇ ಬಂದರೆ, ಬಂದವರು ದಿನದಿಂದ ದಿನಕ್ಕೆ ಜ್ಞಾನಿಗಳಾಗುತ್ತಾರೆ. ಪ್ರಾರ್ಥನೆಗೆ ಬರದೇ ಮನೆಯಲ್ಲಿರುವವರು ಅಜ್ಞಾನಿಯಾಗಿ ಕಾಣುತ್ತಾರೆ. ಹೀಗೆ ಸಂಸಾರದಲ್ಲಿ ವಿರಸ ಉಂಟಾಗುತ್ತದೆ.

"ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ", "ಸತಿ ಪುರುಷರಿಬ್ಬರೂ ಪ್ರತಿ ದೃಷ್ಟಿಯಾಗಿ ಮಾಡಬಲ್ಲಡೆ, ಅದೇ ಮಾಟ ಲಿಂಗದೇವನ ಕೂಡುವ ಕೂಟ" ಎನ್ನುವ ಗುರು ಬಸವಣ್ಣನವರ ವಾಣಿಯಂತೆ, ಸತಿ-ಪತಿ ಇಬ್ಬರೂ ಭಕ್ತರಾಗಬೇಕು.

ಶರಣ ಮೇಳದಲ್ಲಿ ಆಶುಭಾಷಣ ಸ್ಪರ್ಧೆ

ದಿನಾಂಕ 11-01-2008ರಂದು ಮಧ್ಯಾಹ್ನ 2-30 ಗಂಟೆಗೆ ಆಶುಭಾಷಣ ಸ್ಪರ್ಧೆಯನ್ನು ನಡೆಸಲಾಗುವುದು. ಹಲವಾರು ವಿಷಯಗಳನ್ನು ಒಂದು ಚೀಟಿಯಲ್ಲಿ ಬರೆದು ಇಡಲಾಗುತ್ತದೆ. ಒಂದೊಂದು ಚೀಟಿಯನ್ನು ಎತ್ತಿಕೊಂಡು ಒಬ್ಬೊಬ್ಬರು 5 ನಿಮಿಷಗಳ ಕಾಲ ಭಾಷಣ ಮಾಡಬೇಕು. ಚೆನ್ನಾಗಿ ಭಾಷಣ ಮಾಡಿದ ಮೂವರಿಗೆ ಬೆಂಗಳೂರು ರಾಷ್ಟ್ರೀಯ ಬಸವದಳದಿಂದ ಪ್ರಶಸ್ತಿ ಪತ್ರಗಳೊಂದಿಗೆ ಬಹುಮಾನಗಳನ್ನು ನೀಡಲಾಗುವುದು



CPMG/KA/BGW-50/2009-2011 WPP (W)-17R.NO

